ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಬಿ.ವಿ. ನಾಗರತ್ನ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಶೋಕ್ ಜಿ. ನಿಜಗಣ್ಣವರ್

ಕಾನೂನು ವ್ಯವಸ್ಥಾಪಕರು, ಐಎಫ್ಎಫ್ಐಸಿಓ ಟೋಕಿಯೋ ಜಿಐಸಿ ಅಮಿಟೆಡ್ -ವಿರುದ್ಧ-ಶ್ರೀಮತಿ ನಾಗೇಂದ್ರಮ್ ಲಾಚಿ ಮತ್ತು ಇತರರು

ಎಮ್.ಎಫ್.ಎ.ಸಂಖ್ಯೆ:7227/2017 (ಎಮ್‌ವಿಡಿ) ಇದರೊಂದಿಗೆ ಇತರೆ, ದಿನಾಂಕ 23ನೇ ಸೆಪ್ಟೆಂಬರ್, 2019

ತೀರ್ಪು

ನ್ಯಾಯಮೂರ್ತಿ ಶ್ರೀ ಅಶೋಕ್ ಜಿ. ನಿಜಗಣ್ಣವರ್:

ಸದಸ್ಯರು, ಪ್ರಧಾನ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ " ನ್ಯಾಯಾಧಿಕರಣ " ಎಂದು ಉಲ್ಲೇಖಿಸಲಾಗಿದೆ), ಬೆಂಗಳೂರು, (ಎಸ್ಸಿಹೆಚ್ -1) ಇವರು, ಎಮ್.ವಿ.ಸಿ.ಸಂಖ್ಯೆ: 1254/2016 ರಲ್ಲಿ ಹೊರಡಿಸಿದದಿನಾಂಕ: 17.06.2017 ರ ತೀರ್ಪು ಮತ್ತು ಐತೀರ್ಪನ್ನು ಪ್ರಶ್ನಿಸಿ, ಅಪೀಲುದಾರ-ವಿಮಾ ಕಂಪನಿಯು ಈ ಎಮ್.ಎಫ್.ಎ.ಸಂಖ್ಯೆ: 7227/2017 ನ್ನು ಸಲ್ಲಿಸಿದ್ದಾರೆ.

ಈ ಎಮ್.ಎಫ್.ಎ.ಸಂಖ್ಯೆ: 7285/2017 ನ್ನು, ಪರಿಹಾರ ಹೆಚ್ಚಳಕ್ಕಾಗಿ ಮತ್ತು ಎಮ್ವಿಸಂಖ್ಯೆ: 1254/2016 ನಲ್ಲಿ ಹೊರಡಿಸಿದ ಪ್ರಶ್ನೆತ ತೀರ್ಪ ಮತ್ತು ಐತೀರ್ಪಿನ ಮಾರ್ಪಾಡಿಗಾಗಿ ಕೋರಿ ಅಪೀಲುದಾರರು-ಕ್ಲೇಮುದಾರರು (ಅರ್ಜಿದಾರರು) ಸಲ್ಲಿಸಿದ್ದಾರೆ.

2. ಒಂದೇ ರಸ್ತೆ ಸಂಚಾರ ಅಪಘಾತದ ಸಂಬಂಧದಲ್ಲಿ ಎಮ್.ವಿ.ಸಿ.ಸಂಖ್ಯೆ: 1254/2016 ರಲ್ಲಿ ಹೊರಡಿಸಿದ ಸಾಮಾನ್ಯ ತೀರ್ಪಿನಿಂದ ಈ ಎರಡು ಅಪೀಲುಗಳು ಉದ್ಭವಿಸಿವೆ.

3. ಸಂಕ್ಷಿಪ್ತವಾಗಿ ಹೇಳಲಾದ ಸಂಗತಿಗಳು ಹೀಗಿವೆ:ದಿನಾಂಕ: 05.01.2016 ರಂದು ಸುಮಾರು ಬೆಳಿಗ್ಗೆ 11.15 ಗಂಟೆಗೆ, ಮೃತ ಎಲ್. ಬ್ರಹ್ಮಮ್ ೧ @ ಬ್ರಹ್ಮಮ್ ಲಾಚಿ ಅವರು, ಜೆ.ಪಿ. ನಗರದ VI ನೇ ಹಂತದ ವರ್ತುಲ ರಸ್ತೆಯ ಅಂಡರ್ಪಾಸ್ ಬಳಿಯ ಜೆ.ಪಿ. ನಗರ 15 ನೇ ಅಡ್ಡ ರಸ್ತೆಯಲ್ಲಿ, ನೋಂದಣಿಸಂಖ್ಯೆ: ಕೆಎ-51-ಎಲ್ -7251 ಹೊಂದಿರುವ ಅವರ ಮೋಟರು ಸೈಕಲ್ನಲ್ಲಿ ಸಾಗುತ್ತಿದ್ದ ಸಮಯದಲ್ಲಿ, ನೋಂದಣಿಸಂಖ್ಯೆ: ಕೆಎ-51-ಬಿ 7278 ನ್ನು ಹೊಂದಿರುವ ಒಂದು ಟಿಪ್ಪರ್ ಲಾರಿಯು ವೇಗವಾಗಿ ಮತ್ತು ನಿರ್ಲಕ್ಷ್ಯತನದ ರೀತಿಯಲ್ಲಿ ಬಂದು, ಹಿಂಬದಿಯಿಂದ ಅವರ ಮೋಟಾರ್ ಸೈಕಲ್ಗೆ ಡಿಕ್ಕಿ ಹೊಡೆಯಿತು.ಸದರಿ ಪರಿಣಾಮವಾಗಿ, ಮೃತರು ರಸ್ತೆ ಮೇಲೆ ಬಿದ್ದರು ಮತ್ತು ಟಿಪ್ಪರ್ ಲಾರಿಯ ಹಿಂಬದಿಯ ಚಕ್ರವು ಮೃತರ ತಲೆಯ ಮೇಲೆ ಹರಿದು ಹೋಯಿತು.ಇದರ ಪರಿಣಾಮವಾಗಿ, ಮೃತ ಬ್ರಹ್ಮಮ್ ಲಾಚಿ ಅವರ ತಲೆಗೆ ತೀವ್ರ ಗಾಯಗಳುಂಟಾದವು.ಗಾಯಗೊಂಡ ಅವರನ್ನು ರಾಜಶೇಖರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಬೆಂಗಳೂರು ಇಲ್ಲಿಗೆ ಸೇರಿಸಲಾಯಿತು; ಅಲ್ಲಿ ವೈದ್ಯರು ಅವರು " ಮೃತರಾಗಿದ್ದಾರೆ ' ಎಂದು ಘೋಷಿಸಿದರು.ಮೃತರ ಅಕಾಲಿಕ ಮರಣದಿಂದ, ಅವರ ಕಾನೂನು ಪ್ರತಿನಿಧಿಗಳು ಅನಾಥರಾಗಿದ್ದು, ಆರ್ಥಿಕ ಬೆಂಬಲವನ್ನು ಕಳೆದುಕೊಂಡಿದ್ದಾರೆಂದು ವಾದಿಸಲಾಗಿದೆ.

4. ನೋಂದಣಿಸಂಖ್ಯೆ: ಕೆಎ-51-ಬಿ -7278 ನ್ನು ಹೊಂದಿರುವ ಆಪಾದಿತ ಟಿಪ್ಪರ್ ಲಾರಿಯು ವೇಗದ ಮತ್ತು ನಿರ್ಲಕ್ಷ್ಯತನದ ಚಾಲನೆಯಿಂದ ಈ ಅಪಘಾತ ಸಂಭವಿಸಿದೆ ಎಂದು ವಾದಿಸಲಾಗಿದೆ.ಹಾಗಾಗಿ, ಆರ್.ಸಿ. ಮಾಲೀಕರಾಗಿರುವ ಪ್ರತಿವಾದಿಸಂಖ್ಯೆ: 1 ಮತ್ತು ಲಾರಿಯ ವಿಮಾದಾರರಾದ ಪ್ರತಿವಾದಿಸಂಖ್ಯೆ: 2 ಇವರು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಪರಿಹಾರ ಸಂದಾಯ ಮಾಡಲು ಹೊಣೆಗಾರರಾಗಿದ್ದಾರೆ ಎಂದು ವಾದಿಸಲಾಗಿದೆ.ಈ ಸಮರ್ಥನೆಗಳೊಂದಿಗೆ, ಮೃತರ ಕಾನೂನುಬದ್ದ ಪ್ರತಿನಿಧಿಗಳು, ಪರಿಹಾರವನ್ನು ಕೇಮು ಮಾಡಿ ನ್ಯಾಯಾಧಿಕರಣದ ಮುಂದೆ ಈ ಅರ್ಜಿಯನ್ನು ಸಲ್ಲಿಸಿದ್ದಾರೆ.

5. ನೋಟೀಸನ್ನು ಜಾರಿ ಮಾಡಿದ ನಂತರ, ಪ್ರತಿವಾದಿಸಂಖ್ಯೆ: 1 ಮತ್ತು 2 ಇವರು, ಅವರ ನ್ಯಾಯವಾದಿಗಳ ಮೂಲಕ ಹಾಜರಾಗಿ, ಕ್ಲೇಮು ಅರ್ಜಿಯಲ್ಲಿ ಮಾಡಿದ ಸಮರ್ಥನೆಗಳನ್ನು ಅಲ್ಲಗಳೆದು ಹಾಗೂ ಮೋಟಾರು ಸೈಕಲ್ ಸವಾರನ ವೇಗದ ಮತ್ತು ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತ ಸಂಭವಿಸಿದೆಯೇ ಹೊರತು ಟಿಪ್ಪರ್ ಲಾರಿ ಚಾಲಕನ ನಿರ್ಲಕ್ಷ್ಯದ ಕಾರಣದಿಂದ ಅಲ್ಲವೆಂಬ ಕಾರಣಕ್ಕಾಗಿ ಐತೀರ್ಪನ್ನು ರುಜುವಾತುಪಡಿಸಬೇಕೆಂದು ಕೋರಿ ಲಿಖಿತ ಹೇಳಿಕೆಗಳನ್ನು ಸಲ್ಲಿಸಿದ್ದಾರೆ.

6. ಪರಸ್ಪರರ ವಾದಗಳ ಆಧಾರದ ಮೇಲೆ ನ್ಯಾಯಾಧಿಕರಣವು, ಈ ಮುಂದಿನ ವಿಷಯಗಳನ್ನು ಪರಿಗಣನೆಗಾಗಿ ರೂಪಿಸಿದೆ:

1. ನೋಂದಣಿಸಂಖ್ಯೆ: ಕೆಎ-51-ಬಿ -7278 ನ್ನು ಹೊಂದಿರುವ ಟಿಪ್ಪರ್ ಲಾರಿಯ ಚಾಲಕನು, ಅದನ್ನು ವೇಗದಿಂದ ಮತ್ತು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿದ ಕಾರಣದಿಂದ, ಜಯನಗರ ಸಂಚಾರಿ ಪೊಲೀಸ್ ಠಾಣೆಯ ವ್ಯಾಪ್ತಿಯೊಳಗಿನ ಜೆ.ಪಿ. ನಗರ, 6 ನೇ ಹಂತ, ಬೆಂಗಳೂರು ಇಲ್ಲಿರುವ ವರ್ತುಲ ರಸ್ತೆಯ ಅಂಡರ್ ಪಾಸ್ ಬಳಿಯ ಜೆ.ಪಿ. ನಗರದ 15 ನೇ ಅಡ್ಡ ರಸ್ತೆಯಲ್ಲಿ,ದಿನಾಂಕ: 05.01.2016 ರಂದು ಬೆಳಿಗ್ಗೆ ಸುಮಾರು 11.15 ಗಂಟೆಗೆ ಸಂಭವಿಸಿದ ಮೋಟಾರ್ ವಾಹನ ಅಪಘಾತದಲ್ಲಿ ಉಂಟಾದ ಗಾಯಗಳಿಂದ ಅ ಮೃತಪಟ್ಟಿರುವರೆಂದು ಅರ್ಜಿದಾರರು ಸಾಬೀತುಪಡಿಸಿರುವರೇ?

ii.ಮೃತನ ನಿರ್ಲಕ್ಷ್ಯದ ಕೃತ್ಯದಿಂದಾಗಿ ಅಪಘಾತ ಸಂಭವಿಸಿದೆ ಎಂದು ಪ್ರತಿವಾದಿ 2 ಸಾಬೀತುಪಡಿಸಿರುವರೇ?

iii.ಅರ್ಜಿದಾರರು ಪರಿಹಾರಕ್ಕೆ ಹಕ್ಕುಳ್ಳವರಾಗಿರುವರೇ?ಹಾಗಿದ್ದರೆ, ಎಷ್ಟು ಪರಿಹಾರಕ್ಕೆ ಮತ್ತು ಯಾರಿಂದ ಪರಿಹಾರ ಪಡೆಯಲು ಹಕ್ಕುಳ್ಳವರಾಗಿರುವರು?

iv.ಆದೇಶವೇನು?

7. ಮೃತರ ಪತ್ನಿಯಾಗಿರುವ ಅರ್ಜಿದಾರಸಂಖ್ಯೆ: 1 ಇವರು, ಪ್ರಾ.ಸಾ .1 ಆಗಿ ಸ್ವತಃ ಪರೀಕ್ಷೆಗೆ ಒಳಪಟ್ಟಿದ್ದು, ನಿಶಾನೆ ಪಿ -1 ರಿಂದ ಪಿ -41 ರವರೆಗಿನ ದಸ್ತಾವೇಜುಗಳನ್ನು ಗುರುತಿಸಿದ್ದಾರೆ; ಇತರ ಇಬ್ಬರು ಸಾಕ್ಷಿದಾರರನ್ನು ಪ್ರಾ.ಸಾ .2 ಮತ್ತು 3 ಆಗಿ ಪರೀಕ್ಷಿಸಲಾಗಿದೆ ಮತ್ತು ದಸ್ತಾವೇಜುಗಳನ್ನು ನಿಶಾನೆ ಪಿ 42 ರಿಂದ ಪಿ -47 ರವರೆಗೆ ಗುರುತಿಸಲಾಗಿದೆ.ಪ್ರತಿವಾದಿಸಂಖ್ಯೆ: 1-ಟಿಪ್ಪರ್ ಲಾರಿಯ ಮಾಲೀಕನು ಪ್ರ.ಸಾ .1 ಆಗಿ ಸ್ವತಃ ಪರೀಕ್ಷೆಗೊಳಪಟ್ಟಿದ್ದು, ನಿಶಾನೆ ಪ್ರ -1 ರಿಂದ ಪ -6 ರವರೆಗಿನ ದಸ್ತಾವೇಜುಗಳನ್ನು ಗುರುತಿಸಿದ್ದಾರೆ.ಪ್ರತಿವಾದಿಸಂಖ್ಯೆ: 2 ವಿಮಾ ಕಂಪನಿಯ ಕಾನೂನುಸಮ್ಮತ ಪ್ರತಿನಿಧಿಯನ್ನು ಪ್ರ.ಸಾ .2 ಆಗಿ ಪರೀಕ್ಷಿಸಲಾಗಿದ್ದು, ನಿಶಾನೆ ಪ್ರ -7 ರಿಂದ ಪ್ರ -9 ( ಎ) ವರೆಗಿನ ದಸ್ತಾವೇಜುಗಳನ್ನು

ಗುರುತಿಸಲಾಗಿದೆ.ಪ್ರತಿವಾದಿಸಂಖ್ಯೆ: 2-ವಿಮಾ ಕಂಪನಿಯು, ಜಿಲ್ಲಾ ಸಾರಿಗೆ ಕಚೇರಿ (ಡಿಟಿಒ) ಕತಿಹಾರ್, ಬಿಹಾರ್ ಇದರ ಅಧಿಕಾರಿಯನ್ನು ಪ್ರ.ಸಾ .3 ಎಂದು ಪರೀಕ್ಷಿಸಿದ್ದು, ದಸ್ತಾವೇಜುಗಳನ್ನು ನಿಶಾನೆ ಪ್ರ -10 ಮತ್ತು ಪ -11 ಎಂದು ಗುರುತಿಸಲಾಗಿದೆ.

8. ಮೌಖಿಕ ಮತ್ತು ದಾಖಲೆಯಲ್ಲಿ ಇದ್ದ ದಸ್ತಾವೇಜೀಯ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿದ ನಂತರ, ಮಾನ್ಯ ನ್ಯಾಯಾಧಿಕರಣವು, ಟಿಪ್ಪರ್ ಲಾರಿ ಚಾಲಕನ ವೇಗದ ಮತ್ತು ನಿರ್ಲಕ್ಷ್ಯತನದ ಚಾಲನೆಯಿಂದಾಗಿ ಅಪಘಾತ ಸಂಭವಿಸಿದೆ ಎಂಬ ನಿರ್ಣಯಕ್ಕೆ ಬಂದು, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ, ಹಣ ವಸೂಲಿ ದಿನಾಂಕದವರೆಗೆ ವಾರ್ಷಿಕ ಶೇಕಡ 9 ರಷ್ಟು ಬಡ್ಡಿ ದರದೊಂದಿಗೆ, ಹಲವಾರು ಶೀರ್ಷಿಕೆಗಳ ಅಡಿಯಲ್ಲಿ 1,39,83,295/- (ಒಂದು ಕೋಟಿ ಮೂವತ್ತೊಂಬತ್ತು ಲಕ್ಷ ಎಂಭತ್ತೂರು ಸಾವಿರದ ಇನ್ನೂರ ತೊಂಭತ್ತೈದು ರೂಪಾಯಿಗಳನ್ನು ಮಾತ್ರ) ಒಟ್ಟು ಪರಿಹಾರದ ಐತೀರ್ಪು ನೀಡಿದೆ.

9. ಅಪಘಾತ ಸಂಭವಿಸಿದ ದಿನದಂದು, ಟಿಪ್ಪರ್ ಲಾರಿ ಚಾಲಕನು ಸಿಂಧುವಲ್ಲದ ಮತ್ತು ಪರಿಣಾಮಕಾರಿಯಲ್ಲದ ಚಾಲನಾ ಲೈಸೆನ್ಸ್ನ್ನು ಹೊಂದಿರುವಾಗ, ಅಪೀಲುದಾರ-ವಿಮಾ ಕಂಪನಿಯ ವಿರುದ್ಧ ಹೊಣೆಗಾರಿಕೆಯನ್ನು ನಿಗದಿಪಡಿಸುವಲ್ಲಿ ನ್ಯಾಯಾಧಿಕರಣವು ತಪ್ಪು ಮಾಡಿದೆ ಎಂದು ವಾದಿಸಿ, ನ್ಯಾಯಾಧಿಕರಣವು ಐತೀರ್ಪು ನೀಡಿದ ಪರಿಹಾರದ ಸಂದಾಯದ ಹೊಣೆಗಾರಿಕೆಯನ್ನು ಮತ್ತು ಪ್ರಮಾಣವನ್ನು ವಿಮಾ ಕಂಪನಿಯು ಪ್ರಶ್ನಿಸಿದೆ.ವಿಮಾಕಾರರ ಪ್ರಕಾರ, ವಿಮೆಗೊಳಗಾದ ವಾಹನದ ಚಾಲಕನು, ಅಪಘಾತ ಸಂಭವಿಸಿದ ದಿನಾಂಕದಂದು ನಕಲಿ ಚಾಲನಾ ಲೈಸೆನ್ಸ್ನ್ನು ಹೊಂದಿದ್ದನು ಎಂದು ನಿಶಾನೆ ಪ್ರ -5, ಪ -6, ಪ -9 ಮತ್ತು ಪ್ರ -9 (  ಎ) ಇವು ಸ್ಪಷ್ಟವಾಗಿ ಪ್ರಕಟಪಡಿಸುತ್ತವೆಯಾದರೂ, ಈ ದಸ್ತಾವೇಜುಗಳನ್ನು ಸೂಕ್ತವಾಗಿ ಪರಿಗಣಿಸಿರುವುದಿಲ್ಲ; ಜಾರ್ಖಂಡ್ ರಾಜ್ಯದ ಕತಿಹಾರ್ನಲ್ಲಿರುವ ಡಿಟಿಒ ಇಲಾಖೆಯ ಅಧಿಕಾರಿಯು, ನಿಶಾನೆ ಪ್ರ -5 ಪ್ರಕಾರದ ಅಂಥ ಯಾವುದೇ ಚಾಲನಾ ಲೈಸೆನ್ಸ್ನ್ನು ನೀಡಲಾಗಿಲ್ಲ ಅಥವಾ ನವೀಕರಿಸಲಾಗಿಲ್ಲವೆಂದು ನೇರವಾಗಿ ಹೇಳಿದ್ದಾರೆ.ಇದಲ್ಲದೆ, ಅಪಘಾತ ಸಂಭವಿಸಲು ಮೃತನ ನಿರ್ಲಕ್ಷ್ಯತನವು ಕಾರಣವಾಗಿದೆ ಎಂಬುದನ್ನು ಪರಿಗಣಿಸಲು ಸಹ ನ್ಯಾಯಾಧಿಕರಣವು ವಿಫಲವಾಗಿದೆ; ಅವಲಂಬನೆಯ ನಷ್ಟ ಶೀರ್ಷಿಕೆ ಅಡಿಯಲ್ಲಿ ಪರಿಹಾರವನ್ನು ನೀಡುವಲ್ಲಿ ನ್ಯಾಯಾಧಿಕರಣವು ಮಾಡಿದ ಗಣನೆ ಮತ್ತು ಅಂದಾಜು ಅತ್ಯಂತ ಹೆಚ್ಚಾಗಿದೆ ಹಾಗೂ ಅದು ಕಾನೂನಿನ ಮೇರೆಗೆ ಸಮರ್ಥನೀಯವಾದುದಲ್ಲ; ವಾರ್ಷಿಕ ಶೇಕಡ 6 ರ ದರದ ಬಡ್ಡಿಗೆ ಬದಲಾಗಿ ವಾರ್ಷಿಕ ಶೇಕಡ 9 ರ ಬಡ್ಡಿ ದರವನ್ನು ವಿಧಿಸುವಲ್ಲಿ ನ್ಯಾಯಾಧಿಕರಣವು ತಪ್ಪು ಮಾಡಿದೆ ಎಂದು ಅವರು ವಾದಿಸಿದ್ದಾರೆ. ಕಾನೂನು ವ್ಯವಸ್ಥಾಪಕರು, ಐಎಫ್ಎಫ್ಐಸಿಒ ಟೋಕಿಯೋ ಜಿಐಸಿ ಅಮಿಟೆಡ್ 745 -ವಿರುದ್ಧ-ಶ್ರೀಮತಿ ನಾಗೇಂದ್ರಮ್ ಲಾಚಿ ಮತ್ತು ಇತರರು

10. ಎಮ್.ಎಫ್.ಎ.ಸಂಖ್ಯೆ: 7285/2017 ರಲ್ಲಿನ ಅಪೀಲುದಾರರು ಕ್ಲೇಮುದಾರರು, ನ್ಯಾಯಾಧಿಕರಣವು ನೀಡಿದ ಪರಿಹಾರವು ಸಮರ್ಪಕವಾಗಿಲ್ಲವೆಂದು; ದಾಂಪತ್ಯದ ನಷ್ಟ ಮತ್ತು ಶವ ಸಂಸ್ಕಾರದ ವೆಚ್ಚಗಳಿಗಾಗಿ ಹೆಚ್ಚಿನ ಮೊತ್ತದ ಐತೀರ್ಪನ್ನು ನೀಡಬಹುದಾಗಿತ್ತೆಂದು; ಮೃತನ ವಾರ್ಷಿಕ ಆದಾಯದ ಸಂಬಂಧದಲ್ಲಿ ಮಾಡಿದ ಮೌಲ್ಯನಿರ್ಧರಣೆಯು ಅತ್ಯಂತ ಕಡಿಮೆಯಾಗಿದೆ ಹಾಗೂ ಅಪಘಾತ ಸಂಭವಿಸಿದ ದಿನಾಂಕದಂದು ಇದ್ದಂಥ ಒಟ್ಟು ಮಾಸಿಕ/ವಾರ್ಷಿಕ ಆದಾಯವನ್ನು ನ್ಯಾಯಾಧಿಕರಣವು ಗಣನೆಗೆ ತೆಗೆದುಕೊಳ್ಳಬೇಕಾಗಿತ್ತೆಂದು; ಆದಾಯ ತೆರಿಗೆಯಾಗಿ 1,11,045/- ರೂ.ಗಳನ್ನು ಕಡಿತಗೊಳಿಸುವಲ್ಲಿ ಸಹ ನ್ಯಾಯಾಧಿಕರಣವು ತಪ್ಪು ಎಸಗಿದೆ ಎಂದು; ಭವಿಷ್ಯದ ಸಂಭಾವ್ಯತೆಯ ನಷ್ಟ ಮತ್ತು ಅವಲಂಬನೆಯ ನಷ್ಟ ಶೀರ್ಷಿಕೆಗಳ ಅಡಿಯಲ್ಲಿನ ಪರಿಹಾರ

ಪ್ರಮಾಣದ ಮೌಲ್ಯನಿರ್ಧರಣೆಗೆ ಸಂಬಂಧಿಸಿದಂತೆ ಮಾಡಿದ ಲೆಕ್ಕವು ಸೂಕ್ತವಾಗಿಲ್ಲ ಮತ್ತು ಸರಿಯಾಗಿಲ್ಲ ಹಾಗೂ ಅದನ್ನು ಹೆಚ್ಚಿಸಬೇಕೆಂದು ವಾದಿಸಿದ್ದಾರೆ.

11. ವಿಮಾ ಕಂಪನಿ ಪರ ಮಾನ್ಯ ನ್ಯಾಯವಾದಿ ಶ್ರೀ ಎ.ಎನ್. ಕೃಷ್ಣಸ್ವಾಮಿ, ಪ್ರತಿವಾದಿ-ಟಿಪ್ಪರ್ ಲಾರಿ ಮಾಲೀಕರ ಪರ ಮಾನ್ಯ ನ್ಯಾಯವಾದಿ ಎಸ್.ಪಿ. ಶಂಕರ್ ಮತ್ತು ಕ್ಲೇಮುದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ಎ.ಕೆ. ಭಟ್ ಅವರ ವಾದಗಳನ್ನು ಆಲಿಸಲಾಯಿತು.ನ್ಯಾಯಾಧಿಕರಣವು ನೀಡಿದ ತೀರ್ಪ ಮತ್ತು ಐತೀರ್ಪನ್ನು ನಾವು ಅವಲೋಕಿಸಿದ್ದೇವೆ.

12. ಎಮ್ಎಫ್ಸಂಖ್ಯೆ: 7227/2017 ರಲ್ಲಿ ಅಪೀಲುದಾರ-ವಿಮಾ ಕಂಪನಿ ಪರ ಮಾನ್ಯ ನ್ಯಾಯವಾದಿಗಳು ಮೋಟಾರು ವಾಹನಗಳ ಅಧಿನಿಯಮ, 1988 ರ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ ' ಅಧಿನಿಯಮ ' ಎಂದು ಉಲ್ಲೇಖಿಸಲಾಗಿದೆ) 149 ( 2) ಪ್ರಕರಣದ ನಿಬಂಧನೆಗನುಸಾರವಾಗಿ, ಅಧಿನಿಯಮದ 149 ( 2) ( ಎ)(ii) ಪ್ರಕರಣದ ಅಡಿಯಲ್ಲಿ ಇತರ ವಿಷಯಗಳ ಜೊತೆಗೆ ನಿರ್ದಿಷ್ಟಪಡಿಸಿದ ಪ್ರತಿವಾದಗಳನ್ನು ಮಾಡುವ ನಿರುಪಾಧಿಕ ಹಕ್ಕನ್ನು ವಿಮಾ ಕಂಪನಿಯು ಹೊಂದಿದೆ; " ಯುಕ್ತವಾಗಿ ಲೈಸೆನ್ಸ್ ಪಡೆಯದ ' ಅಥವಾ ಲೈಸೆನ್ಸ್ ಪಡೆಯಲು ಅರ್ಹನಾಗಿರದ ವ್ಯಕ್ತಿಯು ಅಪಘಾತಕ್ಕೊಳಗಾದ ವಾಹನವನ್ನು ಚಲಾಯಿಸುತ್ತಿದ್ದನು ಎಂದು ತೋರಿಸಲು ವಿಮಾಕಾರನು ಹಕ್ಕುಳ್ಳವನಾಗಿದ್ದಾನೆ; ಅಪಘಾತಕ್ಕೊಳಗಾದ ವಾಹನದ ಚಾಲಕನು ಯುಕ್ತವಾಗಿ ಲೈಸೆನ್ಸ್ ಹೊಂದಿರಲಿಲ್ಲ ಅಥವಾ ಆತನಿಗೆ ನೀಡಿದ ಲೈಸೆನ್ಸ್ ನಕಲಿಯಾಗಿತ್ತು ಎಂದು ವಿಮಾಕಾರ ಕಂಪನಿಯು ಸಾಬೀತುಪಡಿಸಿದ್ದರೆ, ವಿಮಾ ಕಂಪನಿಯನ್ನು ಹೊಣೆಗಾರಿಕೆಯಿಂದ ಮುಕ್ತಗೊಳಿಸಲು ಮತ್ತು ಅದನ್ನು ಮಾಲೀಕ ಮತ್ತು/ಅಥವಾ ವಾಹನದ ಚಾಲಕನಿಗೆ ಹೊರಿಸಲು ನ್ಯಾಯಾಧಿಕರಣವು ಬದ್ಧವಾಗಿದೆ; ಪ್ರಸ್ತುತ ಮೊಕದ್ದಮೆಯಲ್ಲಿ, ವಿಮಾ ಕಂಪನಿಯು, ವಾಹನದ ಮಾಲೀಕನು ಹಾಜರುಪಡಿಸಿದ ಚಾಲನಾ ಲೈಸೆನ್ಸ್ನ್ನು ಕತಿಹಾರ್ನ ಡಿಟಿಓ ಪ್ರಾಧಿಕಾರಿಗಳು ನೀಡಿದ್ದು ಮತ್ತು ನಿಶಾನೆ ಆರ್-ಎಂದು ಗುರುತಿಸಲಾಗಿರುವ, ಈ ಮೊಕದ್ದಮೆಯಲ್ಲಿ ಹಾಜರುಪಡಿಸಿದ ಲೈಸೆನ್ಸ್, ನಕಲಿ ಲೈಸೆನ್ಸ್ ಎಂದು ಅದರ ಪ್ರತಿವಾದವನ್ನು ಸಾಬೀತುಪಡಿಸಿದೆ.ಈ ಸಂದರ್ಭಗಳ ಹಿನ್ನೆಲೆಯಲ್ಲಿ, ವಿಮಾ ಕಂಪನಿಯ ಮೇಲೆ ಹೊಣೆಗಾರಿಕೆಯನ್ನು ವಿಧಿಸಿ ನ್ಯಾಯಾಧಿಕರಣವು ನೀಡಿದ ನಿರ್ಣಯವು ಸೂಕ್ತವಾಗಿಲ್ಲ ಮತ್ತು ನ್ಯಾಯಯುತವಾಗಿಲ್ಲ ಹಾಗೂ ಕ್ಲೇಮುದಾರರಿಗೆ ಐತೀರ್ಪಿನ ಮೊತ್ತವನ್ನು ಸಂದಾಯ ಮಾಡಲು ಹಾಗೂ ಅದಕ್ಕೆ ಪ್ರತಿಯಾಗಿ ಟಿಪ್ಪರ್ ಲಾರಿ ಮಾಲೀಕ ಮತ್ತು ಚಾಲಕನಿಂದ ಅದನ್ನು ವಸೂಲು ಮಾಡಲು ವಿಮಾ ಕಂಪನಿಗೆ ನಿರ್ದೇಶಿಸಿ ವಿಧಿಸಿದ ನಿಯಮವು ಸರಿಯಾದ ನಿಯಮವಲ್ಲ ಎಂದು ನಿವೇದಿಸಿಕೊಂಡಿದ್ದಾರೆ.

ಮೇಲೆ ಹೇಳಿದ ವಾದಕ್ಕೆ ಸಮರ್ಥನೆಯಾಗಿ, ಮಾನ್ಯ ನ್ಯಾಯವಾದಿಗಳು ಈ ಮುಂದಿನ ನಿರ್ಣಯಗಳನ್ನು ಅವಲಂಬಿಸಿದ್ದಾರೆ:

1. ಭಾರತಿ ರೆಡ್ಡಿ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು (2018) 6 ಎಸ್ಸಿಸಿ 162.

2. ರಾಷ್ಟ್ರೀಯ ವಿಮಾ ಕಂಪನಿ ನಿಯಮಿತ ವಿರುದ್ಧ ಸ್ವರಣ್ ಸಿಂಗ್ ಮತ್ತು ಇತರರು ಎಐಆರ್ 2004 ಎಸ್ 1531:2004 ಎಸಿಜೆ 1: (2004) 3 ಎಸ್ಸಿಸಿ 297

13. ಇದಕ್ಕೆ ತದ್ವಿರುದ್ಧವಾಗಿ, ಪ್ರತಿವಾದಿ-ಟಿಪ್ಪರ್ ಲಾರಿ ಮಾಲೀಕನ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು, ನ್ಯಾಯಾಧಿಕರಣದ ಮುಂದೆ ಸಲ್ಲಿಸಿದ ಆಕ್ಷೇಪಣೆಗಳ ಪಟ್ಟಿಯಲ್ಲಿ ವಿಮಾ ಕಂಪನಿಯು

ವಾದಿಸದಿರುವ ಕಾರಣದ ಮೇಲೆ ಅದು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ನಿವೇದಿಸಿಕೊಂಡಿದ್ದಾರೆ.ವಾಹನದ ಮಾಲೀಕನು ಚಾಲನಾ ಲೈಸೆನ್ಸ್ನ್ನು ಪರಿಶೀಲಿಸಿದ ಮತ್ತು ಪ್ರಾಮಾಣಿಕ ರೀತಿಯಲ್ಲಿ ಚಾಲಕನ ಸಕ್ಷಮತೆ ಮತ್ತು ದಕ್ಷತೆಯನ್ನು ಪರೀಕ್ಷಿಸಿ ಹಾಗೂ ಮಾಲೀಕನ ಮುಂದೆ ಹಾಜರುಪಡಿಸಿದ್ದ ಭಾರೀ ಸರಕು ವಾಹನ (ಹೆಚ್ಜಿವಿ) ಚಲಾಯಿಸುವ ಸಂಬಂಧದ ಚಾಲನಾ ಲೈಸೆನ್ಸ್ನ್ನು ಚಾಲಕನು ಹೊಂದಿರುವನೆಂಬುದನ್ನು ದೃಢಪಡಿಸಿಕೊಂಡ ನಂತರ ಚಾಲಕನನ್ನು ನೇಮಕ ಮಾಡಿಕೊಂಡಿರುವುದಾಗಿ ಪ್ರತಿವಾದ ಮಾಡಿ ವಾಹನ ಮಾಲೀಕನು ಕ್ಲೇಮು ಅರ್ಜಿಯನ್ನು ವಿರೋಧಿಸಿದ್ದಾನೆ.ಹೀಗೆ, ನಿಯೋಜನೆಯ ಸಮಯದಲ್ಲಿ ಚಾಲಕನು ಹಾಜರುಪಡಿಸಿದ ಚಾಲನಾ ಲೈಸೆನ್ಸಿನ ನೈಜತೆ ಮತ್ತು ಸರಿತನದ ಬಗ್ಗೆ ಸಂಶಯಪಡುವ ಯಾವುದೇ ಕಾರಣವನ್ನು ವಾಹನ ಮಾಲೀಕನು ಹೊಂದಿರಲಿಲ್ಲವೆಂಬುದು ಅವರ ವಾದವಾಗಿದೆ.ಅಪಘಾತಕ್ಕೊಳಗಾದ ವಾಹನದ ಚಾಲಕನ ಚಾಲನಾ ಲೈಸೆನ್ಸ್ ನಕಲಿ ಲೈಸೆನ್ಸ್ ಆಗಿತ್ತು ಎಂದು ಯಾವುದೇ ಪ್ರತಿವಾದವನ್ನು ಹೂಡಿರದ ವಿಮಾ ಕಂಪನಿಯು, ಆ ಸಂಬಂಧದಲ್ಲಿ ಸಾಕ್ಷವನ್ನು ಒದಗಿಸಲು ಕಾನೂನಿನಲ್ಲಿ ಹಕ್ಕುಳ್ಳದ್ದಾಗಿರಲಿಲ್ಲ; ಇದಲ್ಲದೆ, ಯಾವುದೇ ಭೌತಿಕ ಸಾಕ್ಷ್ಯವಿಲ್ಲದಿರುವ ಸಂದರ್ಭದಲ್ಲಿ, ಅಪಘಾತದ ದಿನಾಂಕದಂದು ವಾಹನ ಚಲಾಯಿಸಲು ವಾಹನ ಚಾಲಕನು ಯಾವುದೇ ಸಿಂಧುವಾದ ಲೈಸೆನ್ಸ್ನ್ನು ಹೊಂದಿರಲಿಲ್ಲವೆಂಬ ಪ್ರತಿವಾದವನ್ನು ಸಾಬೀತುಪಡಿಸುವಲ್ಲಿ ವಿಮಾಕಾರ ಕಂಪನಿಯು ವಿಫಲವಾಗಿದೆ ಎಂದು ನ್ಯಾಯಾಧಿಕರಣವು ಸರಿಯಾಗಿಯೇ ನಿರ್ಧರಿಸಿದೆ; ವಾಹನದ ಮಾಲೀಕನು ಎಂದರೆ ಪ್ರ.ಸಾ .1 ಒದಗಿಸಿದ ಸಾಕ್ಷ್ಯವು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯದಲ್ಲಿ ವಿಧಿಸಿದ ಮಾರ್ಗಸೂಚಿಗಳನುಸಾರ ಇದೆ. ವಿಮಾ ಕಂಪನಿ ಮತ್ತು ವಿಮೆ ಮಾಡಿಸಿದವರಿಗೆ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಐತೀರ್ಪು ನೀಡಲಾದ ಮೊತ್ತವನ್ನು ಸಂದಾಯ ಮಾಡಲು ನಿರ್ದೇಶಿಸುವಲ್ಲಿ ನ್ಯಾಯಾಧಿಕರಣವು ತಪ್ಪು ಮಾಡಿದೆ ಎಂದು ವಾದಿಸಲಾಗಿದೆ.ಇದಲ್ಲದೆ, ಅಧಿನಿಯಮದ ಉಪಬಂಧಗಳನುಸಾರ ಒಮ್ಮೆ ವಿಮಾ ಪ್ರಮಾಣಪತ್ರವನ್ನು ನೀಡಿದರೆ, ವಿಮಾಕಾರ ಕಂಪನಿಯು ಐತೀರ್ಪನ್ನು ಈಡೇರಿಸಲು ಹೊಣೆಯುಳ್ಳದ್ದಾಗುತ್ತದೆ; ಮುಖ್ಯ ಸಂಗತಿಗಳನ್ನು ಮರೆಮಾಚುವ ಮೂಲಕ ಪಾಲಿಸಿಯನ್ನು ಪಡೆದರೆ, ಅದು ಅಸಿಂಧುವಾಗುತ್ತದೆ ಎಂದು ಅಧಿನಿಯಮದ 149 ( 2) ( ಎ) ಪ್ರಕರಣವು ನಿಯಮಿಸುತ್ತದೆ, ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಮೂರನೇ ಪಕ್ಷಕಾರರ ಕ್ಲೇಮನ್ನು ತಪ್ಪಿಸುವ ವಿಮಾಕಾರ ಕಂಪನಿಯ ಹಕ್ಕು ಮುಖ್ಯ ಸಂಗತಿಗಳ ತಪ್ಪು ನಿರೂಪಣೆಯ ಮೂಲಕ ಮತ್ತು ಮೋಸದಿಂದ ಹಾಗೂ ಯಾವುದೇ ಇತರ ಸಂದರ್ಭದಲ್ಲಿ ಪಡೆದಾಗ ಮಾತ್ರವೇ ಉದ್ಭವಿಸುತ್ತದೆ; ಪಾಲಿಸಿಯ ಷರತ್ತುಗಳ ಯಾವುದೇ ಭಂಗ ಅಥವಾ ಉಲ್ಲಂಘನೆ ಆಗಿದೆಯೇ ಎಂಬುದಕ್ಕೆ ವಿಮಾ ಕಂಪನಿಯ ನಿರೂಪಣೆಗೆ ಸಂಬಂಧಿಸಿದಂತೆ ಅದು ಎತ್ತಿದ ಪ್ರತಿವಾದವನ್ನು ಸಾಬೀತುಪಡಿಸುವ ಹೊಣೆ ವಿಮಾ ಕಂಪನಿಯದ್ದಾಗಿರುತ್ತದೆಯೇ ಹೊರತು ವಿಮೆ ಮಾಡಿಸಿದವನದಲ್ಲ; ಅಪಘಾತ ಸಂಭವಿಸಿದ ಸಮಯದಲ್ಲಿ ವಾಹನ ಚಲಾಯಿಸುತ್ತಿದ್ದ ವ್ಯಕ್ತಿಯು, ಯುಕ್ತ ಲೈಸೆನ್ಸ್ ಹೊಂದಿರಲಿಲ್ಲವೆಂದು ವಿಮಾ ಕಂಪನಿ ತೋರಿಸುವುದಷ್ಟೇ ಸಾಕಾಗುವುದಿಲ್ಲ, ಮುಂದುವರಿದು ಅದು, ವಿಮೆ ಮಾಡಿಸಿದವನ ಕಡೆಯಿಂದ ಪಾಲಿಸಿಯ ಷರತ್ತಿನ ಉಲ್ಲಂಘನೆಯಾಗಿತ್ತೆಂದು ಸಹ ಸಾಬೀತು ಮಾಡಬೇಕಾಗುತ್ತದೆ; ಪ್ರಸ್ತುತ ಮೊಕದ್ದಮೆಯಲ್ಲಿ, ಪ್ರತಿವಾದಿ-ವಾಹನ ಮಾಲೀಕನು, ತನ್ನದೇನೂ ತಪ್ಪಿಲ್ಲವೆಂದು ಮತ್ತು ಚಾಲಕನನ್ನು ನೇಮಿಸಿಕೊಳ್ಳುವ ಮೊದಲು ಎಲ್ಲಾ ಎಚ್ಚರಿಕೆಯ D ಕ್ರಮಗಳನ್ನು ತೆಗೆದುಕೊಂಡಿದ್ದನೆಂದು ಹಾಗೂ ವಾಹನದ ಚಾಲಕನು ಹೊಂದಿರುವ ಲೈಸೆನ್ಸ್, ನಕಲಿ ಲೈಸೆನ್ಸ್ ಆಗಿತ್ತು ಎಂಬುದು ಆತನಿಗೆ ಗೊತ್ತಿರಲಿಲ್ಲವೆಂದು ಸಾಬೀತುಪಡಿಸಲು ತರ್ಕಬದ್ಧ ಸಾಕ್ಷ್ಯವನ್ನು ಮಂಡಿಸಿದ್ದಾನೆ ಎಂದು ವಾದಿಸಲಾಗಿದೆ.

ಮೇಲೆ ಹೇಳಿದ ವಾದಗಳ ಸಮರ್ಥನೆಗೆ, ಪ್ರತಿವಾದಿ-ವಾಹನ ಮಾಲೀಕನ ಪರ ಮಾನ್ಯ ಹಿರಿಯ ನ್ಯಾಯವಾದಿಗಳು, ಈ ಮುಂದಿನ ನಿರ್ಣಯಗಳನ್ನು ಅವಲಂಬಿಸಿದ್ದಾರೆ:

1) ಸ್ಕ್ಯಾಂಡಿಯಾ ಇನ್ಸುರನ್ಸ್ ಕಂಪನಿ ಅಮಿಟೆಡ್ -ವಿರುದ್ಧ ಕೋಕಿಲಾಬೆನ್ ಚಂದ್ರವದನ್ ಮತ್ತು ಇತರರು; ಎಐಆರ್ 1987 ಎಸ್ಸಿ 1184

2) ಬಿ.ವಿ. ನಾಗರಾಜು -ವಿರುದ್ಧ-ಓರಿಯಂಟಲ್ ಇನ್ಸುರನ್ಸ್ ಕಂಪನಿ ಅಮಿಟೆಡ್: 1996 ಎಸಿಜೆ 1178

3) ಸೋಹನ್ ಲಾಲ್ ಪಸ್ಸಿ ವಿರುದ್ಧ-ಪಿ.ಸೇಷ ರೆಡ್ಡಿ ಮತ್ತು ಇತರರು; 1996 ಎಸಿಜೆ 1044

4) ಯುನೈಟೆಡ್ ಇಂಡಿಯಾ ಇನ್ಸುರನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಲೆಹು ಮತ್ತು ಇತರರು; 2003 ಎಸಿಜೆ 611

5) ನ್ಯಾಷನಲ್ ಇನ್ಸುರನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಸ್ವರಣ್ ಸಿಂಗ್ ಮತ್ತು ಇತರರು (ಮೇಅನ);

6) ಪೆಪ್ಸು ರೋಡ್ ಟ್ರಾನ್ಸ್ಪೋರ್ಟ್ ಕಾರ್ಪೊರೇಷನ್ ವಿರುದ್ಧ ನ್ಯಾಷನಲ್ ಇನ್ಸುರನ್ಸ್ ಕಂಪನಿ ಅಮಿಟೆಡ್; 2013 ಎಸಿಜೆ 2440

7) ಬೊಂಡರ್ ಸಿಂಗ್ ಮತ್ತು ಇತರರು -ವಿರುದ್ಧ-ನಿಹಾಲ್ ಸಿಂಗ್ ಮತ್ತು ಇತರರು. (2003) 4 ಎಸ್ಸಿ 161

14. ಈ ವಿಷಯಾಂಶ ಕುರಿತು ಆಪಾದಿತ ವಾಹನ ಮಾಲೀಕನ ಪರ ಮಾನ್ಯ ಹಿರಿಯ ನ್ಯಾಯವಾದಿಗಳ ನಿವೇದನೆಗಳನ್ನು ಕ್ಷೇಮುದಾರರ ಪರ ಮಾನ್ಯ ನ್ಯಾಯವಾದಿಗಳು ಒಪ್ಪಿದ್ದಾರೆ.ಆದಾಗ್ಯೂ, ಕ್ಷೇಮುದಾರರ ಅಪೀಲನ್ನು ಪುರಸ್ಕರಿಸಿ, ಅವರು ಐತೀರ್ಪಿನ ಮೊತ್ತದ ಹೆಚ್ಚಳಕ್ಕೆ ನಿವೇದಿಸಿಕೊಂಡಿದ್ದಾರೆ.

15. ಮಂಡಿಸಲಾದ ವಾದಗಳನ್ನು ಆಲಿಸಿದ ನಂತರ, ಈ ಅಪೀಲುಗಳಲ್ಲಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತಿವೆ:

1. ಪರಿಹಾರ ಸಂದಾಯ ಮಾಡಲು ಟಿಪ್ಪರ್ ಲಾರಿಯ ವಿಮಾ ಕಂಪನಿಯ ಮೇಲಿನ ಹೊಣೆಗಾರಿಕೆಯನ್ನು ಹೊರಿಸುವಲ್ಲಿ ನ್ಯಾಯಾಧಿಕರಣವು ನ್ಯಾಯಯುತವಾಗಿದೆಯೇ?

2. ಅಪೀಲುದಾರರು-ಕ್ಷೇಮುದಾರರು ಪರಿಹಾರ ಹೆಚ್ಚಳಕ್ಕೆ ಹಕ್ಕುಳ್ಳವರಾಗಿದ್ದಾರೆಯೇ?

16. ಪ್ರಸ್ತುತ ಮೊಕದ್ದಮೆಯಲ್ಲಿ, ವಿಮಾ ಕಂಪನಿಯ ಮೊದಲ ಮತ್ತು ಅತ್ಯಂತ ಮುಖ್ಯ ವಾದವು, ಪರಿಹಾರ ಸಂದಾಯ ಮಾಡುವ ಹೊಣೆಗಾರಿಕೆ ಸಂಬಂಧಿಸಿದ್ದಾಗಿದೆ.ವಿಮಾ ಕಂಪನಿಯು, ಅಪಘಾತಕ್ಕೊಳಗಾದ ಟಿಪ್ಪರ್ ಲಾರಿ ಚಾಲಕನ ಚಾಲನಾ ಲೈಸೆನ್ಸ್, ನಕಲಿ ಚಾಲನಾ ಲೈಸೆನ್ಸ್ ಎಂಬ ಕಾರಣದ ಮೇಲೆ ಅದರ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಅದರ ಪ್ರತಿವಾದವನ್ನು ಮುಂದಿಟ್ಟಿದೆ.ದಾಖಲೆಯಲ್ಲಿರುವ ಸಾಕ್ಷ್ಯದ ಕಡೆಗೆ ಗಮನ ನೀಡುವ ಮೊದಲು, ವಾಹನದ ವಿಮಾ ಕಂಪನಿಯ ಹೊಣೆಗಾರಿಕೆಗೆ ಸಂಬಂಧಿಸಿದಂತೆ ಮೋಟಾರು ವಾಹನಗಳ ಅಧಿನಿಯಮದ ಸುಸಂಗತ ಉಪಬಂಧಗಳನ್ನು ಪರಿಗಣಿಸುವುದು ಅವಶ್ಯವೆಂದು ನಾವು ಭಾವಿಸುತ್ತೇವೆ.ಮೋಟಾರು ವಾಹನಗಳ ಅಧಿನಿಯಮ, 1988 ರ 149 ನೇ ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

" 149, ಮೂರನೇ ಪಕ್ಷಕಾರನಿಗೆ ಸಂಭವಿಸುವ ಅಪಾಯಗಳಿಗೆ ಸಂಬಂಧಿಸಿದಂತೆ ವಿಮೆ ಮಾಡಿರುವ ವ್ಯಕ್ತಿಗಳ ವಿರುದ್ಧ ನೀಡಿದ ತೀರ್ಪನ್ನು ಪಾಲಿಸುವಲ್ಲಿ ವಿಮಾಕಾರನ ಕರ್ತವ್ಯ:

( 1) 147 ನೇ ಪ್ರಕರಣದ ( 3) ನೇ ಉಪ-ಪ್ರಕರಣದ ಮೇರೆಗೆ ವಿಮಾ ಪ್ರಮಾಣಪತ್ರವನ್ನು ವಿಮೆ ಮಾಡಿಸಿರುವ ವ್ಯಕ್ತಿಗೆ ನೀಡಿದ ತರುವಾಯ, 147 ನೇ ಪ್ರಕರಣದ ( 1) ನೇ ಉಪಪಕರಣದ (ಬಿ) ಖಂಡದ ಮೇರೆಗೆ (ವಿಮಾ ಪಾಲಿಸಿಯ ನಿಬಂಧನೆಗಳ ಮೂಲಕ ಒಳಗೊಂಡಿರುವ ಹೊಣೆಯಾಗಿದ್ದು) ಅಥವಾ 163 ಎ ಪ್ರಕರಣದ ಉಪಬಂಧಗಳ ಮೇರೆಗೆ ವಿಮಾ ಪಾಲಿಸಿಯು ಒಳಗೊಳ್ಳಬೇಕೆಂದು ಅಗತ್ಯಪಡಿಸಲಾದಂಥ ಯಾವುದೇ ಅಂಥ ಹೊಣೆಗಾರಿಕೆಯ ಬಗ್ಗೆ ೧ ವಿಮಾಪತ್ರದ ಮೂಲಕ ವಿಮೆ ಮಾಡಿಸುವ ಯಾರೇ ವ್ಯಕ್ತಿಯ ವಿರುದ್ಧ ತೀರ್ಪನ್ನು ಅಥವಾ ಐತೀರ್ಪನ್ನು ಪಡೆದರೆ, ವಿಮಾಕಾರನು ವಿಮಾ ಪಾಲಿಸಿಯಿಂದ ತಪ್ಪಿಸಿಕೊಳ್ಳಲು ಅಥವಾ ರದ್ದುಪಡಿಸಲು ಹಕ್ಕುಳ್ಳವನಾಗಿರ ಬಹುದಾಗಿದ್ದರೂ ಅಥವಾ ಅದರಿ ೦ ದ ತಪ್ಪಿಸಿಕೊಂಡಿದ್ದರೂ ಅಥವಾ ಅದನ್ನು ರದ್ದು ಪಡಿಸಿದ್ದರೂ ಕೂಡ ಅವನು ಈ ಪ್ರಕರಣದ ಉಪಬಂಧಗಳಿಗೊಳಪಟ್ಟು ಡಿಕ್ರಿಯ ಪ್ರಯೋಜನವನ್ನು ಹೊಂದಲು ಹಕ್ಕುಳ್ಳ ವ್ಯಕ್ತಿಗೆ, ಆ ಮೇರೆಗೆ ಸಂದೇಹವಿರುವ ವಿಮಾ ಹಣಕ್ಕೆ ಮೀರದಂತೆ ಯಾವುದೇ ಮೊಬಲಗನ್ನು ಅವನು ತೀರ್ಪು ಋಣಿಯಾಗಿದ್ದರೆ ಹೇಗೋ ಹಾಗೆ ಖರ್ಚುಗಳ ಸಂಬಂಧದಲ್ಲಿ ಸಂದೇಹವಿರುವ ಯಾವುದೇ ಮೊಬಲಗು ಮತ್ತು ತೀರ್ಪು ಋಣದ ಮೇಲಿನ ಬಡ್ಡಿಗೆ ಸಂಬಂಧಿಸಿದ ಯಾವುದೇ ಅಧಿನಿಯಮಿತಿಯ ಮೇರೆಗೆ ಆ ಮೊಬಲಗಿನ ಮೇಲೆ ಸಂದಾಯ ಮಾಡಬೇಕಾದ ಬಡ್ಡಿಯ ಯಾವುದೇ ಮೊಬಲಗಿನ ಸಮೇತ ಸಂದಾಯ ಮಾಡತಕ್ಕದ್ದು.

(2) ಯಾವ ವ್ಯವಹರಣೆಗಳಲ್ಲಿ ತೀರ್ಪು ಕೊಡಲಾಗಿದೆಯೋ, ಆ ವ್ಯವಹರಣೆಗಳು ಪ್ರಾರಂಭವಾಗುವುದಕ್ಕೆ ಮುಂಚೆ ಅಥವಾ ಆನಂತರ ಆ ವ್ಯವಹರಣೆಗಳನ್ನು ಹೂಡುವ ಬಗ್ಗೆ ಅಪೀಲು ಇತ್ಯರ್ಥವಾಗದೆ ಇದ್ದು, ಅದರ ಮೇಲಿನ ಜಾರಿ ಕ್ರಮಕ್ಕೆ ತಡೆಹಿಡಿಯುವವರೆಗೂ ಆ ತೀರ್ಪಿನ ಬಗ್ಗೆ ನ್ಯಾಯಾಲಯದ ಮೂಲಕ ವಿಮಾಕಾರನಿಗೆ ನೋಟೀಸು ಬಂದ ಹೊರತು, ( 1) ನೇ ಉಪ ಪ್ರಕರಣದ ಮೇರೆಗೆ ಯಾವುದೇ ಮೊಬಲಗನ್ನು ವಿಮಾಕಾರನು ಸ ೦ ದಾಯ ಮಾಡತಕ್ಕದ್ದಲ್ಲ ಮತ್ತು ಅಂಥ ಯಾವುದೇ ವ್ಯವಹರಣೆಗಳನ್ನು ಹೂಡಿರುವ ಬಗ್ಗೆ ನೋಟೀಸು ಕೊಡಲಾಗಿರುವ ವಿಮಾಕಾರನಿಗೆ ಅದಕ್ಕೆ ಒಬ್ಬ ಪಕ್ಷಕಾರನಾಗಿರಲು ಹಕ್ಕಿರತಕ್ಕದ್ದು ಮತ್ತು ಈ ಕ್ರಮವನ್ನು ಈ ಕೆಳಕಂಡ ಯಾವುದೇ ಕಾರಣಗಳ ಮೇಲೆ ಪ್ರತಿಪಾದಿಸತಕ್ಕದ್ದು, ಎಂದರೆ:

(ಎ) ಈ ಕೆಳಕಂಡ ಷರತ್ತುಗಳ ಪೈಕಿ, ವಿಮಾಪತ್ರದಲ್ಲಿರುವ ಒಂದು ನಿರ್ದಿಷ್ಟ ಷರತ್ತಿನ ಉಲ್ಲಂಘನೆಯಾಗಿದೆ, ಎಂದರೆ:

( i) ವಾಹನವನ್ನು,

(ಎ) ವಿಮಾ ಕರಾರಿನ ದಿನಾಂಕದಂದು, ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ ವಾಹನವನ್ನು ನಡೆಸಲು ಪರ್ಮಿಟ್ಟಿನಲ್ಲಿ ಒಳಗೊಂಡಿರದ ವಾಹನವಾಗಿದ್ದಲ್ಲಿ, ಬಾಡಿಗೆಗೆ ಅಥವಾ ಪ್ರತಿಫಲಕ್ಕಾಗಿ; ಅಥವಾ

(ಬಿ) ವ್ಯವಸ್ಥಿತ ವೇಗ ಸ್ಪರ್ಧೆಗಾಗಿ ಮತ್ತು ವೇಗದ ಪರೀಕ್ಷೆಗಾಗಿ; ಅಥವಾ

(ಸಿ) ವಾಹನವು ಸಾರಿಗೆ ವಾಹನವಾಗಿದ್ದಲ್ಲಿ, ಯಾವ ಪರ್ಮಿಟ್ಟಿನ ಮೇರೆಗೆ ಆ ವಾಹನವನ್ನು ಬಳಸಲಾಗುವುದೋ ಆ ಪರ್ಮಿಟ್ಟಿನಲ್ಲಿ ಅವಕಾಶವಿಲ್ಲದ ಉದ್ದೇಶಕ್ಕಾಗಿ; ಅಥವಾ

(ಡಿ) ವಾಹನವು ಮೋಟಾರು ಸೈಕಲ್ ಆಗಿದ್ದಾಗ, ಪಕ್ಕ ಕಾರನ್ನು ಜೋಡಿಸದೆ ಉಪಯೋಗಿಸುವುದನ್ನು ಹೊರತುಪಡಿಸುವ ಷರತ್ತು; ಅಥವಾ

(ii) ಹೆಸರಿಸಲಾದ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಕ್ರಮಬದ್ಧವಾದ ಲೈಸನ್ನು ಹೊಂದಿರದ ಯಾರೇ ವ್ಯಕ್ತಿಯು ಅಥವಾ ಚಾಲನಾ ಲೈಸನ್ಸನ್ನು ಹೊಂದಲು ಅಥವಾ ಪಡೆಯಲು ಅನರ್ಹನಾದ ಯಾರೇ ವ್ಯಕ್ತಿಯು, ಆ ಅನರ್ಹತೆಯ ಅವಧಿಯಲ್ಲಿ ಚಾಲನೆ ಮಾಡುವುದನ್ನು ಹೊರತುಪಡಿಸುವ ಷರತ್ತು; ಅಥವಾ

(iii) ಯುದ್ಧ, ಅಂತರ್ಯುದ್ಧ, ದೊಂಬಿ ಅಥವಾ ಪ್ರಜಾ ಕ್ಷೋಭೆಯ ಪರಿಸ್ಥಿತಿಗಳಿ ಂ ದಾದ ಅಥವಾ ಅದಕ್ಕೆ ಸಹಾಯಕವಾದ ಕೃತಿಯ ಬಗೆಗಿನ ಹೊಣೆಗಾರಿಕೆಯನ್ನು ಹೊರತುಪಡಿಸುವ ಷರತ್ತು; ಅಥವಾ

(ಬಿ) ಮುಖ್ಯಾಂಶವನ್ನು ಹೊರಗೆಡಹದೆ ಅಥವಾ ಕೆಲವು ಮುಖ್ಯ ವಿವರಗಳಲ್ಲಿ ಸುಳ್ಳಾಗಿರುವ ಸಂಗತಿಯನ್ನು ನಿರೂಪಿಸುವ ಮೂಲಕ ಪಡೆಯಲಾಗಿದೆ ಎಂಬ ಕಾರಣಕ್ಕಾಗಿ ವಿಮಾ ಪಾಲಿಸಿಯು ಶೂನ್ಯವಾಗಿರುತ್ತದೆ.

( 3) ( 1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವಂಥ ಯಾವುದೇ ತೀರ್ಪನ್ನು ಪರಸ್ಪರ ಸಂಬಂಧವುಳ್ಳ ದೇಶದ ನ್ಯಾಯಾಲಯದಿಂದ ಪಡೆದಿದ್ದರೆ ಮತ್ತು ವಿದೇಶದ ತೀರ್ಪಿನ ಸಂದರ್ಭದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ರ 13 ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ, ಅದು ಯಾವ ವಿಷಯದ ಬಗ್ಗೆ ನ್ಯಾಯ ನಿರ್ಣಯ ಮಾಡಿದೆಯೋ ಅದು ನಿರ್ಣಾಯಕವಾಗಿದ್ದರೆ, (ವಿಮಾಕಾರನು ವಿಮಾ ಅಧಿನಿಯಮ, 1938 ರ ಮೇರೆಗೆ ನೋಂದಾಯಿತವಾದ ಮತ್ತು ಪರಸ್ಪರ ಸಂಬಂಧವುಳ್ಳ ದೇಶದಲ್ಲಿನ ಸಂವಾದಿ ಕಾನೂನಿನ ಮೇರೆಗೆ ಅವನು ನೋಂದಾಯಿತನಾಗಿರಲಿ, ಇಲ್ಲದಿರಲಿ) ಡಿಕ್ರಿಯ ಪ್ರಯೋಜನಗಳನ್ನು ಪಡೆಯಲು ಹಕ್ಕುಳ್ಳ ವ್ಯಕ್ತಿಗೆ, ಆ ತೀರ್ಪನ್ನು ಭಾರತದ ಒಂದು ನ್ಯಾಯಾಲಯವು ಕೊಟ್ಟಿದ್ದರೆ ಹೇಗೋ ಹಾಗೆ, ( 1) ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿರುವ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ ಹೊಣೆಯಾಗಿರತಕ್ಕದ್ದು:

ಪರಂತು, ಯಾವ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ತೀರ್ಪನ್ನು ಕೊಡಲಾಗಿದೆಯೋ ಆ ವ್ಯವಹರಣೆಗಳು ಪ್ರಾರ ಂ ಭವಾಗಿರುವುದಕ್ಕೆ ಮುಂಚೆ ಅಥವಾ ಅನಂತರ, ವ್ಯವಹರಣೆಗಳನ್ನು ಹೂಡುವ ಬಗ್ಗೆ ಸಂಬಂಧಪಟ್ಟ ನ್ಯಾಯಾಲಯದ ಮೂಲಕ ವಿಮಾಕಾರನಿಗೆ ನೋಟೀಸು ಬಂದಿದ್ದ ಹೊರತು ಮತ್ತು ಆ ನೋಟೀಸನ್ನು ಕೊಡಲಾದ ವಿಮಾಕಾರನು ಹಾಗೆ ಪರಸ್ಪರ ಸಂಬಂಧವುಳ್ಳ ದೇಶದ ಸಂವಾದಿ ಕಾನೂನಿನ ಮೇರೆಗೆ, ಆ ವ್ಯವಹರಣೆಗಳಿಗೆ ಒಬ್ಬ ಪಕ್ಷಕಾರನಾಗಲು ಮತ್ತು 2 ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದಂಥ ಕಾರಣಗಳ ಮೇಲೆ ಕ್ರಮವನ್ನು ಪ್ರತಿವಾದಿಸಲು ಹಕ್ಕುಳ್ಳವನಾಗಿದ್'ದ ಹೊರತು, ಅಂಥ ಯಾವುದೇ ತೀರ್ಪಿನ ಬಗ್ಗೆ ವಿಮಾಕಾರನು ಯಾವ ಮೊಬಲಗನ್ನೂ ಸಂದಾಯ ಮಾಡತಕ್ಕದ್ದಲ್ಲ.

( 4) ಯಾವ ವ್ಯಕ್ತಿಯು ವಿಮೆಯನ್ನು ಮಾಡಿಸಿದ್ದಾನೆಯೋ ಆ ವ್ಯಕ್ತಿಗೆ, 147 ನೇ ಪ್ರಕರಣದ ( 3) ನೇ ಉಪ-ಪ್ರಕರಣದ ಮೇರೆಗೆ ವಿಮಾ ಪ್ರಮಾಣಪತ್ರವನ್ನು ಕೊಟ್ಟಿರುವಲ್ಲಿ, ಆ ಮೂಲಕ ( 2) ನೇ ಉಪ-ಪ್ರಕಣದ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ಷರತ್ತುಗಳಲ್ಲದೆ ಇತರ ಯಾವುದೇ ಷರತ್ತುಗಳನ್ನು ಉಲ್ಲೇಖಿಸಿ, ವಿಮೆ ಮಾಡಿಸಿದ

88 ವ್ಯಕ್ತಿಗಳ ವಿಮೆಯನ್ನು ನಿರ್ಬಂಧಿಸುವುದೆಂದು ತಾತ್ಪರ್ಯ ವಾಗುವಷ್ಟರಮಟ್ಟಿಗೆ ಆ ವಿಮಾ ಪಾಲಿಸಿಯು, 147 ನೇ ಪ್ರಕರಣದ ( 1) ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ, ವಿಮಾ ಪಾಲಿಸಿಯಲ್ಲಿ ಅಡಕವಾಗಬೇಕೆಂದು ಅಗತ್ಯಪಡಿಸಲಾದಂಥ ಹೊಣೆಗಾರಿಕೆಗಳ ಸಂಬಂಧದಲ್ಲಿ ಪರಿಣಾಮಕಾರಿಯಾಗಿರತಕ್ಕದ್ದಲ್ಲ:

ಪರಂತು, ಈ ಉಪ-ಪ್ರಕರಣದ ಆಧಾರದಿಂದ ಮಾತ್ರ, ವಿಮಾ ಪಾಲಿಸಿಯಲ್ಲಿ ಒಳಗೊಂಡಿರುವ, ಯಾರೇ ವ್ಯಕ್ತಿಯ ಯಾವುದೇ ಹೊಣೆಗಾರಿಕೆಯ ನಿರ್ವಹಣೆಯಲ್ಲಿ ಅಥವಾ ನಿರ್ವಹಣೆಗಾಗಿ ವಿಮಾಕಾರನು ಸಂದಾಯ ಮಾಡಿದ ಯಾವುದೇ ಮೊಬಲಗನ್ನು ಆ ವಿಮಾಕಾರನು ಆ ವ್ಯಕ್ತಿಯಿಂದ ವಸೂಲು ಮಾಡಲು ಅವಕಾಶವಿರತಕ್ಕದ್ದು.

( 5) ವಿಮಾ ಪಾಲಿಸಿಯಿಂದ ವಿಮೆ ಮಾಡಿಸಿದ ವ್ಯಕ್ತಿಯು ವಹಿಸಿದ ಹೊಣೆಗಾರಿಕೆಗೆ ಸಂಬಂಧಿಸಿದಂತೆ ವಿಮಾದಾರನು, ಈ ಪ್ರಕರಣದ ಮೇರೆಗೆ ಸಂದಾಯ ಮಾಡಲು ಬದ್ಧನಾಗತಕ್ಕ ಮೊಬಲಗು, ಆ ಹೊಣೆಗಾರಿಕೆಗೆ ಸಂಬಂಧಿಸಿದಂತೆ ವಿಮಾ ಪಾಲಿಸಿಯ ಮೇರೆಗೆ ಈ ಪ್ರಕರಣದ ಉಪಬಂಧಗಳ ಜೊತೆಗೆ ವಿಮಾದಾರನು ಬದ್ಧನಾಗತಕ್ಕ ಮೊಬಲಗನ್ನು ಮೀರಿದ್ದಲ್ಲಿ, ವಿಮಾದಾರನು ವ್ಯಕ್ತಿಯಿಂದ ಹೆಚ್ಚುವರಿ ಮೊಬಲಗನ್ನು ವಸೂಲು ಮಾಡಲು ಹಕ್ಕು ಹೊಂದಿರತಕ್ಕದ್ದು.

( 6) ಈ ಪ್ರಕರಣದಲ್ಲಿ " ಮುಖ್ಯ ಸಂಗತಿ " ಮತ್ತು " ಮುಖ್ಯ ವಿವರ " ಎಂಬ ಪದಾವಳಿಗೆ, ಅನುಕ್ರಮವಾಗಿ, ದೂರದೃಷ್ಟಿಯುಳ್ಳ ವಿಮಾದಾರನು ಸಂಭಾವ್ಯ ನಷ್ಟದ ಹೊಣೆಯನ್ನು ಹೊರಲು ಸಿದ್ಧನಿರುವನೇ ಮತ್ತು ಇದ್ದಲ್ಲಿ ಎಷ್ಟು ವಿಮಾ ಕಂತಿನ ಮೇಲೆ ಮತ್ತು ಯಾವ ಷರತ್ತುಗಳಿಗೊಳಪಟ್ಟು ಎಂಬುದನ್ನು ನಿರ್ಧರಿಸುವಲ್ಲಿ ಅವನ ನಿರ್ಣಯದ ಮೇಲೆ ಪ್ರಭಾವ ಬೀರುವಂತಹ ಸ್ವಭಾವದ ಸಂಗತಿ ಅಥವಾ ವಿವರ ಎಂದು ಅರ್ಥ ಮತ್ತು " ವಿಮಾ ಪಾಲಿಸಿಯ ನಿಬಂಧನೆಗೊಳಪಟ್ಟಿರುವ ಹೊಣೆಗಾರಿಕೆ " ಎಂಬ ಪದಾವಳಿಗೆ ವಿಮಾ ಪಾಲಿಸಿಯಲ್ಲಿ ಅಡಕವಾಗಿರುವ ಅಥವಾ ವಿಮಾದಾರನು ವಿಮಾ ಪಾಲಿಸಿಯಿಂದ ತಪ್ಪಿಸಿಕೊಳ್ಳಲು ಅಥವಾ ರದ್ದುಗೊಳಿಸಲು ಹಕ್ಕುಳ್ಳವನಾಗಿದ್ದ ಹೊರತು ಅಥವಾ ಅದನ್ನು ತಪ್ಪಿಸಿಕೊಂಡಿದ್ದ ಅಥವಾ ರದ್ದುಗೊಳಿಸಿದ್ದ ಹೊರತು, ಹಾಗೆ ಅಡಕವಾಗಬಹುದಾದ ಹೊಣೆಗಾರಿಕೆ ಎಂದು ಅರ್ಥ.

( 7) ( 2) ನೇ ಉಪ-ಪ್ರಕರಣದಲ್ಲಿ ಅಥವಾ ( 3) ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ನೋಟೀಸನ್ನು ಯಾವ ವಿಮಾಕಾರನಿಗೆ ಕೊಡಲಾಗಿದೆಯೋ ಆ ವಿಮಾಕಾರನು, ( 1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದಂಥ ಯಾವುದೇ ತೀರ್ಪು ಅಥವಾ ಐತೀರ್ಪಿನ ಅಥವಾ ( 3) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದಂಥ ತೀರ್ಪಿನ ಪ್ರಯೋಜನಕ್ಕೆ, ಸಂದರ್ಭಾನುಸಾರ, ( 2) ನೇ ಉಪ-ಪ್ರಕರಣದಲ್ಲಿ ಅಥವಾ ಪರಸ್ಪರ ಸಂಬಂಧವುಳ್ಳ ದೇಶದ ಸಂವಾದಿ ಕಾನೂನಿನಲ್ಲಿ ಉಪಬಂಧಿಸಲಾದ ರೀತಿಯಲ್ಲಲ್ಲದೆ, ಹಕ್ಕುಳ್ಳವನಾಗಿರತಕ್ಕ ಯಾರೇ ವ್ಯಕ್ತಿಗೆ ಸಂಬಂಧಿಸಿದಂತೆ ತಾನು ನಿರ್ವಹಿಸತಕ್ಕ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಹಕ್ಕು ಹೊಂದಿರತಕ್ಕದ್ದಲ್ಲ.

17. ಸ್ಕಾಂಡಿಯಾ ಇನ್ಸುರನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ಕೋಕಿಲಾಬೆನ್ ಚಂದ್ರವದನ್ ಮತ್ತು ಇತರರು (ಮೇಲಿನ) ಮೊಕದ್ದಮೆಯಲ್ಲಿನ ನಿರ್ಣಯದಲ್ಲಿ ಈ ಕೆಳಗಿನಂತೆ ತೀರ್ಮಾನಿಸಲಾಗಿದೆ:

14. ಯಾರೇ ಹೆಸರಿಸಲಾದ ವ್ಯಕ್ತಿ ಅಥವಾ ವ್ಯಕ್ತಿಗಳು ಅಥವಾ ಅನರ್ಹತೆಯ ಅವಧಿಯಲ್ಲಿ ಚಾಲನಾ ಲೈಸೆನ್ಸ್ನ್ನು ಹೊಂದಲು ಅಥವಾ ಪಡೆಯಲು ಅನರ್ಹನಾದ ವ್ಯಕ್ತಿಯು ಚಾಲನೆ ಮಾಡುವುದನ್ನು

ಹೊರತುಪಡಿಸಿದ ಷರತ್ತನ್ನು ಉಲ್ಲಂಘಿಸಿದ್ದರೆ, 96 ( 2) (ಬಿ) (ii) ನೇ ಪ್ರಕರಣವು ವಿಮಾ ಕಂಪನಿಗೆ ವಿನಾಯಿತಿಯನ್ನು ನೀಡುತ್ತದೆ.ಉಲ್ಲಂಘನೆ ಪದವು ಅತ್ಯಂತ ಹೆಚ್ಚಿನ ಮಹತ್ವ ಹೊಂದಿದೆ.ಉಲ್ಲಂಘನೆ ಪದದ ಶಬ್ದಕೋಶದ ಅರ್ಥವು, ವಾಗ್ದಾನ ಅಥವಾ ಬಾಧ್ಯತೆಯ ನಿರ್ಲಕ್ಷ್ಯ ಅಥವಾ ಭಂಗ ಎಂಬುದಾಗಿದೆ (ಕೋಲಿನ್ಸ್ ಆಂಗ್ಲ ಶಬ್ದಕೋಶವನ್ನು ನೋಡಿ). ಆದುದರಿಂದ, ಯುಕ್ತವಾದ ಲೈಸೆನ್ಸ್ ಹೊಂದಿರದ ವ್ಯಕ್ತಿಯು ವಾಹನದ ಸುಪರ್ದಿ ಹೊಂದಿದ್ದನಾದ್ದರಿಂದ ವಿಮೆ ಮಾಡಿರುವ ವ್ಯಕ್ತಿಯು, ವಾಗ್ದಾನ ನಿರ್ಲಕ್ಷ್ಯದ ಅಥವಾ ಉಲ್ಲಂಘನೆಯ ಅಪರಾಧಿಯಾಗಿದ್ದಾನೆಂದು ವಿಮಾ ಕಂಪನಿಯು ಸಾಬೀತುಪಡಿಸಬೇಕಾಗುತ್ತದೆಂಬುದು ಅತ್ಯಂತ ಸ್ಪಷ್ಟ.ಉಲ್ಲಂಘನೆ ಪದವು ಒಳಗೊಂಡಿರುವಂಥ ವಾಗ್ದಾನ ನಿರ್ಲಕ್ಷ್ಯದ ಅಥವಾ ಉಲ್ಲಂಘನೆಯ ಪರಿಕಲ್ಪನೆಯೇ, ವಾಗ್ದಾನಕಾರನ ಕಡೆಯಿಂದ ಉಲ್ಲಂಘನೆ ಅಥವಾ ನಿರ್ಲಕ್ಷ್ಯವು ಉದ್ದೇಶಪೂರ್ವಕ ನಿರ್ಲಕ್ಷ್ಯ ಅಥವಾ ಉಲ್ಲಂಘನೆಯಾಗಿದೆ ಎಂಬುದನ್ನು ವ್ಯಕ್ತಪಡಿಸುತ್ತದೆ.ವಿಮೆ ಮಾಡಿರುವ ವ್ಯಕ್ತಿಯು ತಪ್ಪೇ ಮಾಡಿರದಿದ್ದಲ್ಲಿ ಮತ್ತು ಆತನು ಮಾಡಬಾರದ ಏನನ್ನೂ ಮಾಡದೆ ಇದ್ದಲ್ಲಿ ಅಥವಾ ಯಾವುದರ ಸ ೦ ಬ ೦ ಧದಲ್ಲೂ ದೋಷಿಯಾಗಿರದೆ ಇದ್ದಲ್ಲಿ, ಆತನು ಉಲ್ಲಂಘನೆ ಮಾಡಿದ್ದಾನೆ ಎಂದು ಹೇಗೆ ಆತ್ಮಸಾಕ್ಷಿಯಾಗಿ ಗ್ರಹಿಸಬಹುದು?ಚಾಲನಾ ಲೈಸೆನ್ಸ್ನ್ನು ಹೊಂದಿರದ ವ್ಯಕ್ತಿಯ ಸುಪರ್ದಿಗೆ ವಾಹನವನ್ನು ವಿಮೆ ಮಾಡಿಸಿರುವ ವ್ಯಕ್ತಿಯು ಸ್ವತಃ ನೀಡಿದಾಗ ಮಾತ್ರವೇ, ಆತನು, ಲೈಸೆನ್ಸ್ ಹೊಂದಿದ ಚಾಲಕನು ವಾಹನ ಚಾಲನೆ ಮಾಡುತ್ತಿದ್ದನೆಂಬ ವಾಗ್ದಾನದ ಉಲ್ಲಂಘನೆಯ ಅಪರಾಧಿ ಎಂದು ಹೇಳಬಹುದಾಗಿದೆ ಉಲ್ಲಂಘನೆಯು ವಿಮೆ ಮಾಡಿಸಿದವನ ಕಡೆಯಿ 0 ದ ಆಗಿದೆ ಹಾಗೂ ವಿಮೆ ಮಾಡಿಸಿದವನೇ ವಾಗ್ದಾನದ ಉಲ್ಲಂಘನೆ ಮಾಡಿದ್ದಾನೆ ಅಥವಾ ಒಪ್ಪಂದವನ್ನು ನಿರ್ಲಕ್ಷಿಸಿದ್ದಾನೆ ಎಂಬುದನ್ನು ವಿಮಾ ಕಂಪನಿಯು ಸಾಬೀತುಪಡಿಸಬೇಕು.ಅನ್ಯಥಾ, ವಿಮಾ ಕಂಪನಿಯು ತಪ್ಪು ಮಾಡಿದಂತಾಗುತ್ತದೆ ಮತ್ತು ಅದು ಉಲ್ಲಂಘನೆಯ ತಪ್ಪಿತಸ್ಥನಾಗುತ್ತದೆ ಹಾಗೂ ವಿಮೆ ಮಾಡಿದವನ ನಷ್ಟಭರ್ತಿ ಮಾಡುವ ಬಾಧ್ಯತೆಯಿಂದ ವಿಮಾ ಕಂಪನಿಯು ತಪ್ಪಿಸಿಕೊಳ್ಳಲಾಗುವುದಿಲ್ಲ ಮತ್ತು ವಾಗ್ದಾನಕಾರನು (ವಿಮೆ ಮಾಡಿಸಿದವನು) ತನ್ನ ವಾಗ್ದಾನಕ್ಕೆ ತಪ್ಪಿದ್ದಾನೆಂಬ ಸಂಗತಿಯನ್ನು ಗಮನದಲ್ಲಿರಿಸಿಕೊಂಡು ಆತನು ದೋಷಮುಕ್ತನಾಗುತ್ತಾನೆಂದು ಯಶಸ್ವಿಯಾಗಿ ವಾದಿಸಲಾಗಿದೆ.ಕೆಲವು ದುರದೃಷ್ಟದಿಂದಾಗಿ ಕೆಲವು ದುರ್ಘಟನೆಗಳು ಉಂಟಾದಾಗ ಅಲ್ಲ. ವಿಮೆ ಮಾಡಿದವನು ಲೈಸನ್ಸ್ ಇರುವ ಚಾಲಕನನ್ನು ನೇಮಿಸಿಕೊಂಡಿರುವಷ್ಟರಮಟ್ಟಿಗೆ ಮತ್ತು ಸ್ವತಃ ವಾಹನ ಚಲಾಯಿಸಲು ವ್ಯಕ್ತವಾಗಿ ಅಥವಾ ಇಂಗಿತವಾಗಿ ಲೈಸೆನ್ಸ್ ಇರುವ ಚಾಲಕನ ಸುಪರ್ದಿಗೆ ವಾಹನ ನೀಡಿದಷ್ಟರಮಟ್ಟಿಗೆ, ಆತನ ಅಧಿಕಾರದೊಳಗೆ ಎಲ್ಲವನ್ನೂ ಆತನು ಮಾಡಿದಾಗ, ವಿವಾ ಕ ೦ ಪ ನಿ ೦ ತು ಯಾವುದೇ ಉಲ್ಲ ೦ ಘನ ೦ ತ ಅಪರಾಧಿಯಾಗುವುದಿಲ್ಲವೆಂದು ಹೇಳಬಹುದು.ಮತ್ತು ಇದು, ವಿಮೆ ಮಾಡಿಸಿದವನು ಹೊರತುಪಡಿಸಬಹುದಾದ ಖ ೦ ಡದ ರಕ್ಷಣೆಯನ್ನು ಆಶ್ರಯಿಸಬಹುದೆಂದು ವಿಮೆ ಮಾಡಿದವನ ಕಡೆಯಿಂದ ವಾಗ್ದಾನದ ಉಲ್ಲಂಘನೆ ಅಥವಾ ಭಂಗದ ಸಂದರ್ಭದಲ್ಲಿ ಮಾತ್ರ ಸಾಧ್ಯ.

18. ಯುನೈಟೆಡ್ ಇಂಡಿಯಾ ಇನ್ಸುರನ್ಸ್ ಕಂಪನಿ ಅಮಿಟೆಡ್ -ವಿರುದ್ಧ ಲೆಹು ಮತ್ತು ಇತರರು (ಮೇಲಿನ) ಮೊಕದ್ದಮೆಯಲ್ಲಿನ ಇನ್ನೊಂದು ತೀರ್ಪಿನಲ್ಲಿ ಈ ಕೆಳಗಿನಂತೆ ನಿರ್ಣಯಿಸಲಾಗಿದೆ:

"17. ಒಬ್ಬ ವಾಹನ ಮಾಲೀಕನು ಚಾಲಕನನ್ನು ನೇಮಿಸಿಕೊಂಡಾಗ, ಇದರಿ ಂ ದಾಗಿ ಚಾಲಕ ನಾ ಚಾಲನಾ ಲೈಸೆನ್ಸ್ನ್ನು ಹೊಂದಿದ್ದಾನೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ.ಚಾಲಕನು ಹಾಜರುಪಡಿಸಿದ ಚಾಲನಾ ಲೈಸೆನ್ಸ್ನ್ನು ನೋಡಿದಾಗ ಅದು ನೈಜವಾದುದೆಂದು ಕಂಡುಬಂದರೆ, ಲೈಸೆನ್ಸ್ನ್ನು ವಾಸ್ತವವಾಗಿ ಸಕ್ಷಮ ಪ್ರಾಧಿಕಾರವು ನೀಡಿದ್ದೇ ಅಥವಾ ಅಲ್ಲವೇ ಎಂಬುದನ್ನು ಮಾಲೀಕನು ಕಂಡುಕೊಳ್ಳಬೇಕೆಂದು ನಿರೀಕ್ಷಿಸಲಾಗುವುದಿಲ್ಲ.ನಂತರ ಮಾಲೀಕನು ಚಾಲಕನನ್ನು ಪರೀಕ್ಷಿಸಬೇಕು.ಚಾಲಕನು ವಾಹನ ಚಲಾಯಿಸಲು ಸಮರ್ಥನಾಗಿರುವನೆ ಂ ದು ಮಾಲೀಕನಿಗೆ ಕ ಂ ಡುಬ ಂ ದರೆ, ಚಾಲಕನನ್ನು ನಿಯೋಜಿಸಿಕೊಳ್ಳಬಹುದು.ಮಾಲೀಕನಿಗೆ ತೋರಿಸಲಾದ ಚಾಲನಾ ಲೈಸೆನ್ಸ್ ಸಿಂಧುವೇ ಅಥವಾ ಅಲ್ಲವೇ ಎಂಬುದನ್ನು, ದೇಶದ ಎಲ್ಲಾ ಕಡೆಗಳಲ್ಲಿ ಹರಡಿಕೊಂಡಿರುವ ' ಆರ್ಟಿಓ'ಗಳಲ್ಲಿ ಅವರು ವಿಚಾರಿಸಬೇಕೆಂದು ವಿಮಾ ಕಂಪನಿಗಳು ನಿರೀಕ್ಷಿಸುವುದು ಸ್ವಲ್ಪ ವಿಚಿತ್ರವೆನಿಸುತ್ತದೆ.ಹೀಗಾಗಿ, ಚಾಲಕನು ಲೈಸೆನ್ಸ್ ಹೊಂದಿದ್ದಾನೆ ಮತ್ತು ಸಮರ್ಥವಾಗಿ ವಾಹನ ಚಲಾಯಿಸುತ್ತಾನೆ ಎಂಬುದನ್ನು ಮಾಲೀಕನು ಸ್ವತಃ ಮನವರಿಕೆ ಮಾಡಿಕೊಂಡಲ್ಲಿ, 149 ( 2) ( ಎ)(ii) ನೇ ಪ್ರಕರಣದ ಉಲ್ಲ ಂ ಘನೆಯಾಗುವುದಿಲ್ಲ.ನಂತರ, ವಿಮಾ ಕಂಪನಿಯು ಹೊಣೆಗಾರಿಕೆಯಿಂದ ಮುಕ್ತಗೊಳ್ಳುವುದಿಲ್ಲ.ಅಂತಿಮವಾಗಿ, ಲೈಸೆನ್ಸ್ ನಕಲಿ ಎಂಬುದು ನಿಜವಾದರೂ, ಮಾಲೀಕನಿಗೆ/ವಿಮೆ ಮಾಡಿದವನಿಗೆ ಲೈಸೆನ್ಸ್ ನಕಲಿ ಎಂದು ತಿಳಿದಿತ್ತೆಂದು ಅಥವಾ ಗಮನಕ್ಕೆ ಬಂದಿತ್ತೆಂದು ಮತ್ತು ಆಗಲೂ ಆತನು ಆ ವ್ಯಕ್ತಿಗೆ ಚಾಲನೆ ಮಾಡಲು ಅನುಮತಿ ನೀಡಿದ್ದನೆಂದು ವಿಮಾ ಕಂಪನಿಯು ಸಾಬೀತುಪಡಿಸಿದ ಹೊರತು ಅದು ಹೊಣೆ ಹೊರುವುದು ಮು ಂ ದುವರಿಯುತ್ತದೆ.ಅತ್ಯಂತ ಮುಖ್ಯವಾಗಿ, ಅಂಥ ಸಂದರ್ಭದಲ್ಲೂ ಸಹ, ನಿರಪರಾಧಿ ಮೂರನೇ ಪಕ್ಷಕಾರನಿಗೆ ವಿಮಾ ಕಂಪನಿಯು ಹೊಣೆಗಾರನಾಗುತ್ತದೆಯಾದರೂ, ಅದನ್ನು ವಿಮೆ ಮಾಡಿದವನಿಂದ ವಸೂಲು ಮಾಡಲು ಶಕ್ತವಾಗಿರುತ್ತದೆ.ಸ್ಕಾಂಡಿಯಾಸ್, ಸೋಹನ್ ಲಾಲ್ ಪಸ್ಸಿಸ್ ಮತ್ತು ಕಮ್ಲಾಸ್ ಮೊಕದ್ದಮೆಗಳಲ್ಲಿ ಇದೇ ನಿಯಮವನ್ನು ವಿಧಿಸಲಾಗಿದೆ.ಅದರಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳೊಂದಿಗೆ ನಾವು ಸಂಪೂರ್ಣ ಸಮ್ಮತಿ ಹೊಂದಿದ್ದೇವೆ ಮತ್ತು ಭಿನ್ನ ಅಭಿಪ್ರಾಯ ತಾಳುವ ಯಾವುದೇ ಕಾರಣ ಕಂಡುಬರುತ್ತಿಲ್ಲ.19

19. ರಾಷ್ಟ್ರೀಯ ವಿಮಾ ಕಂಪನಿ ನಿಯಮಿತ ವಿರುದ್ಧ ಸ್ವರಣ್ ಸಿಂಗ್ ಮತ್ತು ಇತರರು (ಮೇಲಿನ) ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಇನ್ನೊಂದು ತೀರ್ಪಿನಲ್ಲಿ ಈ ಕೆಳಗಿನಂತೆ ಅದು ನಿರ್ಣಯಿಸಿದೆ:

"73. ಸೋಹನ್ ಲಾಲ್ ಪಸ್ಸಿ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ನಿರ್ಣಯಿಸಲಾದಂತೆ, ಸುಸಂಗತ ಸಮಯದಲ್ಲಿ ವಾಹನವನ್ನು ಲೈಸೆನ್ಸ್ ಹೊಂದಿರದ ವ್ಯಕ್ತಿಯು ಚಲಾಯಿಸುತ್ತಿದ್ದನೆಂದು ಹೇಳುವ ಮೂಲಕ ಮಾತ್ರವೇ ವಿಮಾ ಕಂಪನಿಯು, ಪರಿಹಾರ ಸ ಂ ದಾಯ ಮಾಡುವ ಅದರ ಹೊಣೆಗಾರಿಕೆ ಯಿ ಂ ದ ತಪ್ಪಿಸಿಕೊಳ್ಳಲಾಗವುದಿಲ್ಲ.

76. ಸ ಂ ಸತ್ತು ಅಧಿನಿಯಮತಿಗೊಳಿಸಿದ ಂ ತೆ ಅಪಘಾತ ಕೊಳಗಾದವನ ಸಾಮಾಜಿಕ ಅಗತ್ಯತೆಗೆ ಪರಿಹಾರ ನೀಡುವುದು, ಬ್ರಿಟಿಷ್ ಇಂಡಿಯಾ ಜನರಲ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್ -ವಿರುದ್ಧ ಕ್ಯಾಪ್ಟನ್ ಇಥ್ಬಾರ್ ಸಿಂಗ್ ಮತ್ತು ಇತರರು ಮೊಕದ್ದಮೆಯಲ್ಲಿ, 1959 ಕ್ಕೆ ಮೊದಲು ಈ ನ್ಯಾಯಾಲಯದ ಮೂವರು-ನ್ಯಾಯಾಧೀಶರ ಪೀಠದ ಮುಂದೆ ಪರಿಗಣನೆಗಾಗಿ ಬಂದಿದ್ದ ವಸ್ತು-ವಿಷಯವಾಗಿತ್ತು ಅದರಲ್ಲಿ ನ್ಯಾಯಮೂರ್ತಿ ಸರ್ಕಾರ್ ಅವರು ಪೀಠದ ಪರವಾಗಿ ಮಾತನಾಡಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದ್ದಾರೆ:

" " 1 ಮತ್ತೆ ನಾವು ಸಂಪೂರ್ಣವಾಗಿ ಅಂಗೀಕರಿಸಲಾಗದ ವಾದವನ್ನು ಕಾಣುತ್ತಿದ್ದೇವೆ.ಗಾಯಗೊಂಡ ವ್ಯಕ್ತಿಗೆ ಸಂಬಂಧಿಸಿದಂತೆ ವಿಮಾಕಾರನಿಗೆ ಹೊಣೆಗಾರಿಕೆ ಸೃಜಿಸಲಾಗಿದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲವಾದರೂ, ಶಾಸನದಲ್ಲಿ ನಿರ್ದಿಷ್ಟಪಡಿಸಿದ ಕೆಲವು ಕಾರಣಗಳಿಗಾಗಿ ಆ ಹೊಣೆಗಾರಿಕೆಯನ್ನು ತಪ್ಪಿಸುವ ಹಕ್ಕನ್ನು ಸಹ ಅದು ವ್ಯಕ್ತವಾಗಿ ಪದಗೊಳಿಸಿದೆ.ಆ ಕಾರಣಗಳಿಗೆ ಇನ್ನಷ್ಟು ಕಾರಣಗಳನ್ನು ಸೇರಿಸುವುದು ನಮ್ಮ ಕೆಲಸವಲ್ಲ ಮತ್ತು ಅದರಿಂದಾಗಿ ಶಾಸನ ಕಠಿಣತೆಗೆ ಕಾರಣವಾಗಬಹುದು.ಇದಲ್ಲದೆ, ಶಾಸನವು ಯಾವುದೇ ತೊಂದರೆಯನ್ನುಂಟು ಮಾಡುತ್ತದೆ ಎಂಬುದರಲ್ಲಿ ನಮಗೆ ವಿಶ್ವಾಸವಿಲ್ಲ.ಮೊದಲನೆಯದಾಗಿ, ವಿಮಾದಾರನು ಹಕ್ಕನ್ನು ಹೊಂದಿದ್ದಾನೆ, ಪರಂತು ಪರಂತು,, ವಿಮೆ ಮಾಡಿಸಿದವನ ಹೆಸರಿನಲ್ಲಿನ ಕೃತ್ಯವನ್ನು ಪ್ರತಿವಾದಿಸಲು ಪಾಲಿಸಿ ಮೂಲಕ ಅದನ್ನು ಆತನು ಕಾಯ್ದಿಟ್ಟುಕೊಂಡಿದ್ದಾನೆ ಮತ್ತು ಆತನು ಹಾಗೆ ಮಾಡಿದರೆ, ವಿಮೆ ಮಾಡಿಸಿದವನಿಗೆ ಮುಕ್ತವಾಗಿರುವ ಎಲ್ಲಾ ಪ್ರತಿವಾದಗಳನ್ನು ತರುವಾಯದಲ್ಲಿ ಆತನ ಮೂಲಕ ವಾದಿಸಬಹುದಾಗಿದೆ ಹಾಗೂ ಆತನು ವಾದಿಸಲು ಹಕ್ಕುಳ್ಳವನಾಗಲು ಕೇಮು ಮಾಡಬೇಕೆಂಬ ಯಾವುದೇ ಇತರ ಪ್ರತಿವಾದವಿಲ್ಲ.ಹೀಗಾಗಿ, ವಿಮೆ ಮಾಡಿಸಿದವನ ಹೆಸರಿನಲ್ಲಿ ಕ್ರಮವನ್ನು ಪ್ರತಿವಾದಿಸುವ ಹಕ್ಕಿಗಾಗಿ ಉಪಬಂಧಿಸುವ ಮೂಲಕ, ಆತನು ತೊಂದರೆಗಳು ಯಾವುವಾದರೂ ಇದ್ದರೆ ಅವುಗಳನ್ನೆಲ್ಲಾ ತಪ್ಪಿಸಬೇಕು ಮತ್ತು ಇದನ್ನು ಮಾಡಲು ಆತನು ಸಂಪೂರ್ಣವಾಗಿ ಸ್ವತಂತ್ರನಾಗಿದ್ದಾನೆ.ಎರಡನೆಯದಾಗಿ, ಆತನು ಸಂದಾಯ ಮಾಡಬೇಕೆಂದಾದರೆ, ಪಾಲಿಸಿ ಒಪ್ಪಂದದಲ್ಲಿರುವುದನ್ನು ಸಂದಾಯ ಮಾಡಲು ಆತನು ಬದ್ಧನಾಗಿರಲಿಲ್ಲ, ಉಪ-ಪ್ರಕರಣ ( 3) ಮತ್ತು ಉಪ-ಪ್ರಕರಣ ( 4) ಇವುಗಳ ಪರಂತುಕಗಳ ಮೇರೆಗೆ ವಿಮೆ ಮಾಡಿಸಿದ ವ ನಿ ಂ ದ ಇದನ್ನು ಆ ತ ನ ವ ಸ ಲು ಮಾಡಿಕೊಳ್ಳಬಹುದಾಗಿದೆ.ವಿಮೆ ಮಾಡಿಸಿದವನು ಹುಲು ಮಾನವನಾಗಿರಬೇಕು ಮತ್ತು ವಿಮೆದಾರನು ಆತನಿಂದ ಏನನ್ನೂ ವಸೂಲು ಮಾಡಲು ಶಕ್ತನಾಗಿಲ್ಲದಿರಬಹುದು.ಆದರೆ, ಇದಕ್ಕೆ ಉತ್ತರ, ಅದು ವಿಮೆದಾರನ ದುರಾದೃಷ್ಟ.ಅಂಥ ಸಂದರ್ಭಗಳಲ್ಲಿ ಗಾಯಗೊಂಡ ವ್ಯಕ್ತಿಯು ಸಹ, ವಿಮೆ ಮಾಡಿಸಿದವನಿಂದ, ಗಾಯಗಳನ್ನುಂಟು ಮಾಡಿದ ವ್ಯಕ್ತಿಯಿಂದ ತಾನು ಅನುಭವಿಸಿದ ನಷ್ಟಗಳನ್ನು ವಸೂಲು ಮಾಡಲು ಶಕ್ತನಾಗಿರುವುದಿಲ್ಲ.

90. ಅರ್ಜಿದಾರನ ಪರವಾಗಿ ವಾದಿಸಲಾಗಿರುವಂತೆ, ನಕಲಿ ಅಥವಾ ಸುಳ್ಳು ಸೃಷ್ಟಿಯ ಲೈಸನ್ಸ್, ಲೈಸೆ ಅಲ್ಲವಾದರೂ, ಇಲ್ಲಿ ಈ ಮೊದಲು ಗಮನಿಸಿದಂತೆ, ಇಲ್ಲಿ ಉದ್ಭವಿಸುವ ಪ್ರಶ್ನೆ ಎಂದರೆ, ಮಾಲೀಕನು ವಿಮಾಪತ್ರದ ಷರತ್ತುಗಳ ಅಥವಾ ವಿಮಾ ಒಪ್ಪ ಂ ದದ ಉದ್ದೇಶಪೂರ್ವಕ ಉಲ್ಲಂಘನೆ ಮಾಡಿದ ಅಪರಾಧಿಯಾಗಿದ್ದನೇ ಎ ಂ ಬುದನ್ನು ವಿಮಾದಾರನು ಸಾಬೀತುಪಡಿಸಬೇಕೇ ಎಂಬುದಾಗಿದೆ.ಲೆಹ್ರು ಮೊಕದ್ದಮೆಯಲ್ಲಿ (ಮೇಲೆ ಹೇಳಿದ), ಈ ವಿಷಯವನ್ನು ಕೆಲವು ವಿವರಗಳಲ್ಲಿ ಪರಿಗಣಿಸಲಾಗಿದೆ.ಪೀಠದ ಅಭಿಪ್ರಾಯಗಳೊಂದಿಗೆ ನಾವು ಸಾಮಾನ್ಯ ಸಮ್ಮತಿಯನ್ನು ಹೊಂದಿದ್ದೇವೆಯಾದರೂ, ಅದರಲ್ಲಿ ನೀಡಿದ ಅಭಿಪ್ರಾಯಗಳನ್ನು, ವಿಮೆ ಮಾಡಿಸಿದವನ ಕಡೆಯಿಂದ ಉದ್ದೇಶಪೂರ್ವಕ ಉಲ್ಲಂಘನೆಯಾಗಿರುವುದನ್ನು ವಿಮಾದಾರನು ಸಾಬೀತುಪಡಿಸಬೇಕು ಮತ್ತು ಯಾವುದೇ ಪ್ರತಿವಾದವನ್ನು ಎತ್ತುವುದರಿಂದ ಅದರ ಅನರ್ಹತೆಯ ಉದ್ದೇಶಕ್ಕಾಗಿರುವುದಿಲ್ಲ ಅಥವಾ ಏನೇ ಆಗಲಿ ಯಾವುದೇ ಹೊಣೆಗಾರಿಕೆಯಿಂದ

96 ಮಾಲೀಕರನ್ನು ಮುಕ್ತಗೊಳಿಸಲಾಗುವುದು ಎಂಬ ಅದರ ನಿಬಂಧನೆಗಳಲ್ಲಿನ ಕಾನೂನಿನ ಅಗತ್ಯಗಳ ಹಿನ್ನೆಲೆಯಲ್ಲಿ ಮಾಡಲಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕೆಂಬುದರ ಕಡೆಗೆ ಗಮನ ಸೆಳೆಯುವುದು

ನಮ್ಮ ಉದ್ದೇಶವಾಗಿದೆ.ತರುವಾಯದಲ್ಲಿ ವಿಷಯದ ಈ ಅಂಶ ಕುರಿತು ಸ್ವಲ್ಪ ವಿವರವಾಗಿ ನಾವು ವ್ಯವಹರಿಸುವೆವು.

97. ಕಮ್ಲಾ (ಮೇಲೆ ಹೇಳಿದ) ಮತ್ತು ಲೆಕ್ಕು (ಮೇಲೆ ಹೇಳಿದ) ಮೊಕದ್ದಮೆಗಳಲ್ಲಿನ ತೀರ್ಪುಗಳಲ್ಲಿ ಕಂಡುಬರುವ ವಾದಕ್ಕೆ ಸ 0 ಬ 0 ಧಪಡುವಷ್ಟರಮಟ್ಟಿಗೆ, ವಾಹನವನ್ನು ಚಲಾಯಿಸುತ್ತಿದ್ದ ವ್ಯಕ್ತಿಯು ಹೊಂದಿದ ಲೈಸೆನ್ಸ್ ನಕಲಿಯಾಗಿತ್ತು ಎಂಬ ಪರಿಣಾಮಕ್ಕೆ ಮಾಡಿದ ಪ್ರತಿವಾದವು ವಿಮಾ ಕಂಪನಿಗಳಿಗೆ ಲಭ್ಯವಾಗುತ್ತಿತ್ತಾದರೂ, ಅದರ ಹೊರತಾಗಿಯೂ, ಮಾಲೀಕನ ಕಡೆಯಿಂದಾದ ನಿರ್ಲಕ್ಷ್ಯದ ವಾದವನ್ನು ಸಾಬೀತುಪಡಿಸಲಾಗಿತ್ತು ಅಥ ವಾ ಅದು ಪ್ರತಿಯೊ ಂ ದು ಮೊಕದ್ದಮೆಯಲ್ಲಿ ನಿರ್ಧರಿಸಬೇಕಾದ ಪ್ರಶ್ನೆಯಾಗಿರಲಿಲ್ಲ ಎಂಬುದರ ಕಡೆ ನಾವು ಗಮನ ಸೆಳೆಯಬಯಸುತ್ತೇವೆ.

98. ಆದಾಗ್ಯೂ, ಲೆಹು (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ನ್ಯಾಯಾಲಯವು, ವಾಹನದ ಮಾಲೀಕನು ಯಾವುದೇ ಸಂದರ್ಭಗಳ ಮೇರೆಗೆ, ಈ ಸಂಬಂಧದಲ್ಲಿ ಯಾವುದೇ ವಿಚಾರಣೆ ಮಾಡುವ ಯಾವುದೇ ಕರ್ತವ್ಯವನ್ನು ಹೊ ಂ ದಿರಲಿಲ್ಲವೆ ಂ ದು ಓದಬೇಕಾಗುತ್ತದೆ.ಆದಾಗ್ಯೂ, ಇದು ಪುನಃ ಪ್ರತಿಯೊಂದು ಪ್ರತ್ಯೇಕ ಮೊಕದ್ದಮೆಯಲ್ಲಿ ಪರಿಗಣನೆಗಾಗಿ ಉದ್ಭವಿಸುವ ಪ್ರಶ್ನೆಯಾಗಿದೆ.

99. ಲೆಹು (ಮೇಲೆ ಹೇಳಿದ) ಮೊಕದ್ದಮೆಯಲ್ಲಿ, ಶ್ರೀ ಸಾಳ್ವೆ ಅವರ ನಿವೇದನೆ ಏನೆಂದರೆ ಈ ನ್ಯಾಯಾಲಯವು, ಎಲ್ಲಾ ಉದ್ದೇಶಕ್ಕಾಗಿ ಮತ್ತು ತಾತ್ಪರ್ಯಕ್ಕಾಗಿ, ಲೈಸೆನ್ಸ್ ನಕಲಿಯಾಗಿದ್ದು, ಸರಿಯಾಗಿರುವುದೆಂದು ಕಂಡುಬಂದಿಲ್ಲವೆಂಬ ಪ್ರತಿವಾದವನ್ನು ಮಾಡುವ ವಿಮಾದಾರನ ಹಕ್ಕನ್ನು ತೆಗೆದುಕೊಂಡಿದೆ.ಅಂಥ ಪ್ರತಿವಾದವನ್ನು ಖಂಡಿತವಾಗಿಯೂ ಮಾಡಬಹುದಾಗಿದೆಯಾದರೂ, ಚಾಲಕನು ಹೊಂದಿದ ಲೈಸೆನ್ಸ್ನ ನೈಜತೆಯನ್ನು ಪರಿಶೀಲಿಸಲು ಅಥವಾ ಅನ್ಯಥಾ ರೀತಿಯಲ್ಲಿ ವಿಮೆ ಮಾಡಿಸಿದವನು ಸಾಕಷ್ಟು ಕಾಳಜಿ ಮತ್ತು ಎಚ್ಚರಿಕೆ ವಹಿಸಿಲ್ಲವೆಂಬುದನ್ನು ವಿಮಾದಾರನು ಸಾಬೀತುಪಡಿಸಬೇಕಾಗುತ್ತದೆ. "

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ಅಡಕವಾಗಿ ತಿಳಿಸಿದೆ:

" (i) ಮೋಟಾರು ವಾಹನಗಳ ಅಧಿನಿಯಮ, 1988 ರ XI ನೇ ಅಧ್ಯಾಯವು, ಮೂರನೇ ಪಕ್ಷಕಾರನ ಅಪಾಯಸಾಧ್ಯತೆಗೆ ಪ್ರತಿಯಾಗಿ ವಾಹನಗಳ ಕಡ್ಡಾಯ ವಿಮೆಯನ್ನು ಉಪಬಂಧಿಸಿರುವುದು, ಮೋಟಾರು ವಾಹನಗಳ ಬಳಕೆಯಿಂದ ಸಂಭವಿಸಿದ ಅಪಘಾತಗಳ ಬಲಿಪಶುಗಳಿಗೆ ನಷ್ಟ ಪರಿಹಾರದ ಮೂಲಕ ಪರಿಹಾರ ಒದಗಿಸುವುದು ಸಾಮಾಜಿಕ ಕ್ಷೇಮಾಭಿವೃದ್ಧಿ ಶಾಸನವಾಗಿದೆ.ಈ ಪ್ರಮುಖ ಉದ್ದೇಶದೊಂದಿಗೆ ಎಲ್ಲಾ ವಾಹನಗಳನ್ನು ಕಡ್ಡಾಯ ವಿಮೆಗೊಳಪಡಿಸುವ ಉಪಬಂಧಗಳನ್ನು ಮತ್ತು ಅಧಿನಿಯಮದ ಉಪಬಂಧಗಳನ್ನು, ಸದರಿ ಉದ್ದೇಶವನ್ನು ಪರಿಣಾಮಕಾರಿಗೊಳಿಸುವಂತೆ ಹಾಗೆ ಅರ್ಥೈಸಬೇಕಾಗುತ್ತದೆ.

(ii) ಮೋಟಾರು ವಾಹನಗಳ ಅಧಿನಿಯಮದ 148 ( 2) (   ಎ)(ii) ನೇ ಪ್ರಕರಣದ ನಿಬಂಧನೆಗಳ ಜೊತೆಯಲ್ಲಿ, ಸದರಿ ಅಧಿನಿಯಮದ 163 ಎ ಪ್ರಕರಣದ ಅಥವಾ 166 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಕ್ಷೇಮು ಅರ್ಜಿಗಳಲ್ಲಿ ಪ್ರತಿವಾದ ಮಾಡಲು ವಿಮಾದಾರನು ಹಕ್ಕುಳ್ಳವನಾಗಿದ್ದಾನೆ.

(iii) ಪಾಲಿಸಿ ಷರತ್ತಿನ ಉಲ್ಲಂಘನೆಯು, ಉದಾಹರಣೆಗೆ, ವಿಮಾದಾರನು ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು, ೧೪೯ನೇ ಪ್ರಕರಣದ (೨)(ಎ)() ಉಪ–ಪ್ರಕರಣದಲ್ಲಿರುವಂತೆ, ಚಾಲಕನ ಅನರ್ಹತೆ

ಅಥವಾ ಚಾಲಕನ ಅಸಿಂಧುವಾದ ಚಾಲನಾ ಲೈಸೆನ್ಸ್ ಕುರಿತು ವಿಮೆ ಮಾಡಿಸಿದವನು ತಪ್ಪುಎಸಗಿರುವ ಬಗ್ಗೆ ಸಾಬೀತುಪಡಿಸಬೇಕಾಗುತ್ತದೆ. ಗೈರುಹಾಜರಿ, ನಕಲಿ ಅಥವಾ ಅಸಿಂಧುವಾದ ಚಾಲನಾ ಲೈಸೆನ್ಸ್ ಅಥವಾ ಸುಸಂಗತ ಸಮಯದಲ್ಲಿ ಚಾಲನೆ ಸಂಬಂಧದಲ್ಲಿ ಚಾಲಕನ ಅನರ್ಹತೆ ಇವು, ವಿಮೆ ಮಾಡಿಸಿದವರ ಅಥವಾ ಮೂರನೇ ಪಕ್ಷಕಾರರ ವಿರುದ್ಧ ವಿಮಾ ಕಂಪನಿಗೆ ಲಭ್ಯವಿರುವ ಪ್ರತಿವಾದಗಳಾಗುವುದಿಲ್ಲ. ಅದರ ಕಡೆಯ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು, ವಿಮೆ ಮಾಡಿಸಿದವನು ನಿರ್ಲಕ್ಷ್ಯತೆಯ ಅಪರಾಧಿಯಾಗಿದ್ದನು ಮತ್ತು ಯುಕ್ತವಾದ ಲೈಸೆನ್ಸ್ ಹೊಂದಿರುವ ಅಥವಾ ಸುಸಂಗತ ಸಮಯದಲ್ಲಿ ಚಾಲನೆಗೆ ಅನರ್ಹನಾಗಿರದ ಚಾಲಕನಿಂದ ವಾಹನಗಳ ಬಳಕೆಗೆ ಸಂಬಂಧಿಸಿದಂತೆ ಪಾಲಿಸಿಯ ಷರತ್ತನ್ನು ಈಡೇರಿಸುವ ಸಂಗತಿಯಲ್ಲಿ ಸಮರ್ಪಕ ಕಾಳಜಿ ವಹಿಸಲು ಆತನು ವಿಫಲನಾಗಿದ್ದನು ಎಂದು ವಿಮಾ ಕಂಪನಿಯು ಸಾಬೀತುಪಡಿಸಬೇಕಾಗುತ್ತದೆ.

(iv) ವಿಮಾ ಕಂಪನಿಗಳ ಹೊಣೆಗಾರಿಕೆಯನ್ನು ತಪ್ಪಿಸುವ ದೃಷ್ಟಿಯಿಂದ, ಸದರಿ ವ್ಯವಹರಣೆಗಳಲ್ಲಿ ಎತ್ತಿದ ಲಭ್ಯ ವಾದವನ್ನು (ಗಳನ್ನು) ಮಾತ್ರ ಅವರು ಸಾಬೀತುಪಡಿಸಬೇಕಿದ್ದಾಗ್ಯೂ, ವಾಹನದ ಮಾಲೀಕನ ಕಡೆಯಿಂದಾದ ' ಉಲ್ಲಂಘನೆ'ಯನ್ನು ಸಹ ಸಾಬೀತುಪಡಿಸಬೇಕಾಗುತ್ತದೆ; ಅದಕ್ಕೆ ಸಂಬಂಧಿಸಿದ ರುಜುವಾತಿನ ಹೊಣೆಯು ಅವುಗಳದ್ದೇ ಆಗಿರುತ್ತದೆ.

(v) ಸದರಿ ಜವಾಬ್ದಾರಿಯು ಪ್ರತಿಯೊಂದು ಮೊಕದ್ದಮೆಯ ಸಂಗತಿಗಳು ಮತ್ತು ಸಂದರ್ಭಗಳನ್ನಾಧರಿಸಿರುವಷ್ಟರಮಟ್ಟಿಗೆ, ನ್ಯಾಯಾಲಯವು, ಸದರಿ ಜವಾಬ್ದಾರಿಯನ್ನು ಹೇಗೆ ನಿಭಾಯಿಸಬೇಕು ಎ ಂ ಬುದರ ಬಗ್ಗೆ ಯಾವುದೇ ಮಾನದ ಂ ಡವನ್ನು ವಿಧಿಸಲಾಗುವುದಿಲ್ಲ.

(vi) ಸುಸಂಗತ ಕಾಲಾವಧಿಯಲ್ಲಿ ಚಾಲಕನು ಸಿಂಧುವಾದ ಲೈಸೆನ್ಸನ್ನು ಹೊಂದಿದ ಅಥವಾ ಚಾಲನೆ ಮಾಡಲು ಆತನಿಗಿರುವ ಅರ್ಹತೆಗೆ ಸಂಬಂಧಿಸಿದಂತೆ ವಿಮೆ ಮಾಡಿಸಿದವನ ಕಡೆಯಿಂದಾದ ಉಲ್ಲ ಂ ಘನೆಯನ್ನು ಸಾಬೀತುಪಡಿಸಲು ವಿಮಾದಾರನು ಸಮರ್ಥನಾದಲ್ಲಿ ಸಹ, ಚಾಲನಾ ಲೈಸೆನ್ಸಿನ ಷರತ್ತಿನ ಸದರಿ ಉಲ್ಲ ಂ ಘನೆಯು ಅಥವಾ ಉಲ್ಲಂಘನೆಗಳು, ಅಪಘಾತ ಸಂಭವಿಸಿದ್ದಕ್ಕೆ ಕಾರಣವಾಗಿರುವವೆಂದು ಹಾಗೆ ಮೂಲಭೂತ ಕಾರಣ/ಗಳು ಎ ಂ ದು ಕ ಂ ಡುಬ ಂ ದ ಹೊರತು, ವಿಮೆ ಮಾಡಿಸಿದವರ ಕಡೆಗಿನ ವಿಮಾ ಕಂಪನಿಯ ಹೊಣೆಗಾರಿಕೆಯಿಂದ ಅದನ್ನು ತಪ್ಪಿಸಲು ಅನುಮತಿ ನೀಡಲಾಗುವುದಿಲ್ಲ.ಪಾಲಿಸಿ ಷರತ್ತುಗಳನ್ನು ವ್ಯಾಖ್ಯಾನಿಸುವಲ್ಲಿ, ನ್ಯಾಯಾಧಿಕರಣಗಳು, ಅಧಿನಿಯಮದ 149 ( 2) ನೇ ಪ್ರಕರಣದ ಅಡಿಯಲ್ಲಿ ವಿಮೆ ಅ ಮಾಡಿಸಿದವನಿಗೆ ಲಭ್ಯವಿರುವ ಪ್ರತಿವಾದಗಳಿಗೆ ಅವಕಾಶ ನೀಡಲು, " ಮುಖ್ಯ ಉದ್ದೇಶದ ನಿಯಮ " ಮತ್ತು " ಮೂಲಭೂತ ಉಲ್ಲಂಘನೆ " ಪರಿಕಲ್ಪನೆಯನ್ನು ಅನ್ವಯಿಸುತ್ತವೆ.

(vii) ಚಾಲಕನು ಹಾಜರುಪಡಿಸಿದ ಚಾಲನಾ ಲೈಸೆನ್ಸ್, ಕಾನೂನಿನ ಅಗತ್ಯತೆಗಳನ್ನು ಈಡೇರಿಸುತ್ತದೆಯೇ ಅಥವಾ ಇಲ್ಲವೇ (ನಕಲಿಯಾದುದೇ ಅಥವಾ ಇಲ್ಲವೇ) ಎಂಬುದನ್ನು ಕಂಡುಕೊಳ್ಳಲು ಮಾಲೀಕನು ಯುಕ್ತ ಕಾಳಜಿ ವಹಿಸಿದ್ದನೇ ಅಥವಾ ಇಲ್ಲವೇ ಎಂಬ ಪ್ರಶ್ನೆಯನ್ನು ಪ್ರತಿಯೊಂದು ಮೊಕದ್ದಮೆಯಲ್ಲಿ ನಿರ್ಧರಿಸಬೇಕಾಗುತ್ತದೆ.

(viii) ಅಪಘಾತದ ಸಮಯದಲ್ಲಿ ವಾಹನವನ್ನು ಕಲಿಕಾ ಪರವಾನಗಿ ಹೊಂದಿರುವ ವ್ಯಕ್ತಿಯು ಚಲಾಯಿಸುತ್ತಿದ್ದಿದ್ದರೆ, ವಿಮಾ ಕಂಪನಿಗಳು ಡಿಕ್ರಿಯನ್ನು ಈಡೇರಿಸಲು ಹೊಣೆಗಾರರಾಗುತ್ತಾರೆ.

(ix) 168 ನೇ ಪ್ರಕರಣದೊಂದಿಗೆ ಓದಲಾಗುವ 165 ನೇ ಪ್ರಕರಣದ ಮೇರೆಗೆ ರಚಿಸಿದ ಕ್ಲೇಮುಗಳ ನ್ಯಾಯಾಧಿಕರಣಕ್ಕೆ, ಮೋಟಾರು ವಾಹನಗಳ ಉಪಯೋಗದಿಂದ ಉಂಟಾಗುವ ವ್ಯಕ್ತಿಗಳ ಮರಣ ಅಥವಾ ಅವರ ದೈಹಿಕ ಕೃತಿಯನ್ನು ಅಥವಾ ಹಾಗೆ ಮೂರನೇ ಪಕ್ಷದ ಅಥವಾ ಇವೆರಡನ್ನೂ ಒಳಗೊಳ್ಳುವ ಅಪಘಾತಗಳ ಸಂಬಂಧದಲ್ಲಿ ಸಲ್ಲಿಸಲಾಗುವ ಪರಿಹಾರದ ಕ್ಲೇಮುಗಳ ಬಗ್ಗೆ ನ್ಯಾಯ ನಿರ್ಣಯಿಸಲು ಅಧಿಕಾರ ನೀಡಲಾಗಿದೆ.ನ್ಯಾಯಾಧಿಕರಣದ ಸದರಿ ಅಧಿಕಾರವು, ಒಂದು ಕಡೆ ಕ್ಲೇಮುದಾರ ಅಥವಾ ಕ್ಲೇಮುದಾರರು ಮತ್ತು ಇನ್ನೊಂದು ಕಡೆ, ವಿಮೆ ಮಾಡಿಸಿದವನು, ವಿಮಾದಾರ (ಕಂಪನಿ) ಮತ್ತು ಚಾಲಕನ ನಡುವೆ ಪರಸ್ಪರ ಕ್ಲೇಮುಗಳನ್ನು ನಿರ್ಧರಿಸಲು ನಿರ್ಬಂಧಿತವಾಗಿಲ್ಲ.ನ್ಯಾಯ ನಿರ್ಣಯಿಸುವ ಪ್ರಕ್ರಿಯೆಯಲ್ಲಿ, ಪರಿಹಾರಕ್ಕಾಗಿನ ಕ್ಲೇಮು ಮತ್ತು ವಿಮಾದಾರನಿಗಾಗಿ ಪ್ರತಿವಾದದ ಅಥವಾ ಪ್ರತಿವಾದಗಳ ಲಭ್ಯತೆಯನ್ನು ನಿರ್ಧರಿಸುವ ಹಾಗೂ ವಿಮೆದಾರ ಮತ್ತು ವಿಮೆ ಮಾಡಿಸಿದವರ ನಡುವೆ ಪರಸ್ಪರ ವಿವಾದಗಳನ್ನು ನಿರ್ಧರಿಸುವ ಅಧಿಕಾರ ಮತ್ತು ಅಧಿಕಾರವ್ಯಾಪ್ತಿ ನ್ಯಾಯಾಧಿಕರಣಕ್ಕೆ ಅವಶ್ಯವಾಗಿ ಇದೆ. ಕ್ಲೇಮುದಾರರು ಪರಿಕಾರಕ್ಕಾಗಿ ಸಲ್ಲಿಸಿದ ಕ್ಲೇಮಿನ ನ್ಯಾಯ ನಿರ್ಣಯಿಸುವ ಪ್ರಕ್ರಿಯೆಯಲ್ಲಿ, ವಿಮೆದಾರ ಮತ್ತು ವಿಮೆ ಮಾಡಿಸಿದವರ ನಡುವೆ ಪರಸ್ಪರ ಕ್ಲೇಮುಗಳನ್ನು ಮತ್ತು ವಿವಾದಗಳನ್ನು ಕುರಿತು ನೀಡಿದ ನಿರ್ಣಯ ಮತ್ತು ಅದನ್ನು ಕುರಿತು ನೀಡಿದ ಐತೀರ್ಪು, ಕ್ಲೇಮುದಾರರ ಪರವಾಗಿ ಐತೀರ್ಪನ್ನು ಜಾರಿಗೊಳಿಸಲು ಮತ್ತು ಕಾವ್ಯಗತಗೊಳಿಸಲು, ಅಧಿನಿಯಮದ 174 ನೇ ಪ್ರಕರಣದಲ್ಲಿ ಉಪಬ ಂ ಧಿಸಿದ ಂ ಥ ರೀತಿಯಲ್ಲಿ ಜಾರಿಗೊಳಿಸಬಹುದು ಮತ್ತು ಕಾವ್ಯಗತಗೊಳಿಸಬಹುದು. "(ನಾವು ಒತ್ತು ನೀಡಿದ್ದೇವೆ)

20. ಪೆಪ್ಪು ರಸ್ತೆ ಸಾರಿಗೆ ನಿಗಮ ವಿರುದ್ಧ-ರಾಷ್ಟ್ರೀಯ ವಿಮಾ ಕಂಪನಿ (ಮೇಲಿನ) ಮೊಕದ್ದಮೆಯಲ್ಲಿನ ಇನ್ನೊಂದು ನಿರ್ಣಯದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ತೀರ್ಪು ನೀಡಿದೆ:

"10. ಪ ರಿ ಹಾರ ಕ್ರಿ ಸಲ್ಲಿಸಿದ ಕ್ಸ ವಿನಲ್ಲಿ, ಅ ಅಪಘಾತಕ್ಕೊಳಗಾದ ವಾಹನದ ಚಾಲಕನು ಯುಕ್ತವಾದ ಲೈಸೆನ್ಸ್ ಹೊಂದಿರಲಿಲ್ಲ ಎಂಬ ರಕ್ಷಣೆಯನ್ನು 149 ( 2) 9 ( ಎ)(ii) ನೇ ಪ್ರಕರಣದ ಮೇರೆಗೆ ತೆಗೆದುಕೊಳ್ಳಲು ವಿಮಾದಾರನು ನಿಶ್ಚಿತವಾಗಿಯೂ ಮುಕ್ತನಾಗಿದ್ದಾನೆ.ಒಮ್ಮೆ ಅಂಥ ರಕ್ಷಣೆಯನ್ನು ತೆಗೆದುಕೊಂಡಲ್ಲಿ, ರುಜುವಾತಿನ ಹೊಣೆಯು ವಿಮಾದಾರನ ಮೇಲಿರುತ್ತದೆ.ಅದರ ನಂತರ ಸಹ, ಚಾಲಕನು ಹೊಂದಿರುವ ಲೈಸೆನ್ಸ್ ನಕಲಿ ಎಂದು ಸಾಬೀತುಪಡಿಸಬೇಕಾಗುತ್ತದೆ.ಹೊಣೆಗಾರಿಕೆಯು ವಿಮಾದಾರನದ್ದೇ ಅಥವಾ ಅಲ್ಲವೆ ಎಂಬುದು ಅಣಕು ಪ್ರಶ್ನೆಯಾಗುತ್ತದೆ.ವಾಹನ ಮಾಲೀಕನಿಗೆ ಸಂಬಂಧಪಡುವಷ್ಟರಮಟ್ಟಿಗೆ, ಒಬ್ಬ ಚಾಲಕನನ್ನು ಆತನು ನಿಯೋಜಿಸಿಕೊಂಡಾಗ, ಚಾಲಕನು ಸಿಂಧುವಾದ ಚಾಲನಾ ಲೈಸೆನ್ಸ್ನ್ನು ಹೊಂದಿದ್ದಾನೆಯೇ ಎಂಬುದನ್ನು ಆತನು ಪರಿಶೀಲಿಸಬೇಕಾಗುತ್ತದೆ.ಆ ತರುವಾಯ, ಚಾಲಕನ ಸಾಮರ್ಥ್ಯ ಕುರಿತು ಸ್ವತಃ ಮನವರಿಕೆ ಮಾಡಿಕೊಳ್ಳಬೇಕು.ಆ ಸಂಬಂಧದಲ್ಲಿ ಮನವರಿಕೆ ಮಾಡಿಕೊಂಡರೂ ಸಹ, ವಾಹನ ಚಲಾಯಿಸಲು ಅರ್ಹನಾದ ಮತ್ತು ಸಮರ್ಥನಾದ ವ್ಯಕ್ತಿಯನ್ನು ನಿಯೋಜಿಸಿಕೊಳ್ಳುವಲ್ಲಿ ಮಾಲೀಕನು ಯುಕ್ತ ಕಾಳಜಿ ವಹಿಸಿದ್ದಾನೆಂದು ಹೇಳಬಹುದಾಗಿದೆ.ಮಾಲೀಕನ್ನು ಅದನ್ನು ಮೀರಿ ಹೋಗಿ, ಚಾಲಕನನ್ನು ಸೇವೆಗೆ ನಿಯೋಜಿಸಿಕೊಳ್ಳುವ ಮೊದಲು ಲೈಸೆನ್ಸ್ ನೀಡಿಕೆ ಪ್ರಾಧಿಕಾರದಲ್ಲಿ ಚಾಲನಾ ಲೈಸೆನ್ಸ್ನ ನೈಜತೆಯನ್ನು ಪರಿಶೀಲಿಸುವಷ್ಟರ ಮಟ್ಟಿಗೆ ಆತ ನಿ ಂ ದ ನಿರೀಕ್ al ಇಟ್ಟುಕೊಳ್ಳಲಾಗುವುದಿಲ್ಲ.ಆದಾಗ್ಯೂ, ವಾಹನದ ವಿಮೆಯ ಸಮಯದಲ್ಲಿ ಅಥವಾ ಆ ತರುವಾಯ, ಲೈಸೆನ್ಸ್ ನೀಡುವ ಪ್ರಾಧಿಕಾರಿಯಿಂದ ಯುಕ್ತವಾಗಿ ಪರಿಶೀಲಿತವಾದ ಲೈಸೆನ್ಸ್ನ್ನು ಹೊಂದಲು ವಾಹನದ ಮಾಲೀಕನನ್ನು ವಿಮಾ ಕಂಪನಿಯು ಅಗತ್ಯಪಡಿಸಿದ್ದರೆ ಅಥವಾ ಮಾಲೀಕನು ನಿಯೋಜಿಸಿಕೊಂಡ ಚಾಲಕನಿಗೆ ನೀಡಿದ ಲೈಸೆನ್ಸ್ ನಕಲಿಯಾಗಿದೆ ಎಂದು ಆತನ

ಗಮನಕ್ಕೆ ತಂದಿದ್ದರೆ ಮತ್ತು ಆಗಲೂ ಲೈಸೆನ್ಸ್ ನೀಡಿಕೆ ಪ್ರಾಧಿಕಾರಿಯಿಂದ ಲೈಸೆನ್ಸ್ನ ನೈಜತೆಗೆ ಸಂಬಂಧಿಸಿದ ವಿಷಯದ ಪರಿಶೀಲನೆಗೆ ಮಾಲೀಕನು ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ, ಆಗ ಸಂದರ್ಭವು ಭಿನ್ನವಾಗಿರುವುದು.ಇದನ್ನೇ ಸ್ವರಣ್ ಸಿಂಗ್ ಮೊಕದ್ದಮೆಯಲ್ಲಿ ವಿವರಿಸಲಾಗಿದೆ.ತನ್ನ ಚಾಲಕನು ಹೊಂದಿರುವ ಲೈಸೆನ್ಸ್ ನಕಲಿಯಾಗಿದೆ ಎಂದು ಮಾಲೀಕನಲ್ಲಿ ಅಂಥ ಮಾಹಿತಿ ಇದ್ದ ಹೊರತಾಗಿಯೂ, ಸೂಕ್ತ ಪರಿಶೀಲನೆಗಾಗಿ ವಿಮೆ ಮಾಡಿಸಿದವನು ಕ್ರಮ ತೆಗೆದುಕೊಳ್ಳದೆ ಹೋದರೆ, ಆಗ ವಿಮೆ ಮಾಡಿಸಿದವನದು ತಪ್ಪು ಎಂದಾಗುತ್ತದೆ ಮತ್ತು ಅಂಥ ಸಂದರ್ಭಗಳಲ್ಲಿ, ವಿಮಾ ಕಂಪನಿಯು ಪರಿಹಾರ ಸಂದಾಯಕ್ಕೆ ಹೊಣೆಯುಳ್ಳದ್ದಾಗುವುದಿಲ್ಲ. "1

21. ಮೇಲೆ ಹೇಳಿದ ನಿರ್ಣಯಗಳಲ್ಲಿ ವಿಧಿಸಿದ ತತ್ವಗಳ ದೃಷ್ಟಿಯಿಂದ, ಪರಿಹಾರ ಸಂದಾಯ ಮಾಡುವ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ, ವಾಹನದ ಚಾಲಕನು ಸಿಂಧುವಾದ ಲೈಸೆನ್ಸ್ ಹೊಂದಿರಲಿಲ್ಲ ಅಥವಾ ಆತನು ಹೊಂದಿರುವನೆಂದು ಹೇಳಲಾದ ಲೈಸೆನ್ಸ್ ನಕಲಿ ಲೈಸೆನ್ಸ್ ಆಗಿದೆ ಎಂದು ಸಾಬೀತುಪಡಿಸಲು ತೃಪ್ತಿಕರವಾದ ಸಾಕ್ಷ್ಯವನ್ನು ಮಂಡಿಸುವುದು ವಿಮಾ ಕಂಪನಿಯ ಕರ್ತವ್ಯವಾಗಿದೆ ಎಂಬುದು ಸುಸ್ಪಷ್ಟ.ವಿಮಾ ಕಂಪನಿಯು ಎತ್ತಿದ ಲಭ್ಯ ಪ್ರತಿವಾದವನ್ನು ಅದು ಸಾಬೀತುಪಡಿಸುವುದಷ್ಟೇ ಅಲ್ಲದೆ, ವಾಹನದ ಮಾಲೀಕನ ಕಡೆಯಿಂದಾದ ಉಲ್ಲಂಘನೆಯನ್ನು ಸಹ ಸಾಬೀತುಪಡಿಸಬೇಕು ಅಥವಾ ಸಿಂಧುವಾದ ಲೈಸೆನ್ಸ್ ಹೊಂದಿರದ ಅಥವಾ ನಕಲಿ ಲೈಸೆನ್ಸ್ನ್ನು ಹೊಂದಿರುವ ವ್ಯಕ್ತಿಗೆ ವಾಹನ ಚಲಾಯಿಸಲು ಅನುಮತಿ ನೀಡುವ ಮೂಲಕ ಅಪಘಾತಕ್ಕೆ ವಿಮೆ ಮಾಡಿಸಿದವನು ಸಹ ಕಾರಣನಾಗಿದ್ದಾನೆ ಎಂದು ಸಾಬೀತುಪಡಿಸಬೇಕಾಗುತ್ತದೆ.

ಆದುದರಿಂದ, ಚಾಲಕನು ಹಾಜರುಪಡಿಸಿದ ಚಾಲನಾ ಲೈಸೆನ್ಸ್ ನಕಲಿಯಾಗಿತ್ತೇ ಅಥವಾ ಅನ್ಯಥಾ, ಕಾನೂನಿನ ಅಗತ್ಯವನ್ನು ಈಡೇರಿಸಿ ಅಥವಾ ಇಲ್ಲವೇ ಎಂಬುದನ್ನು ಕಂಡುಕೊಳ್ಳಲು ಮಾಲೀಕನು ಯುಕ್ತ ಕಾಳಜಿ ವಹಿಸಿದ್ದನೇ ಎಂಬ ಪ್ರಶ್ನೆಯನ್ನು, ದಾಖಲೆಯಲ್ಲಿ ಹಾಜರುಪಡಿಸಿದ ಸಾಕ್ಷ್ಯವನ್ನು ಪರಿಗಣಿಸುವ ಮೂಲಕ ಪ್ರತಿಯೊಂದು ಮೊಕದ್ದಮೆಯಲ್ಲಿ ನಿರ್ಧರಿಸಬೇಕಾಗುತ್ತದೆ.ಈ ಮೊಕದ್ದಮೆಯಲ್ಲಿ ದಾಖಲೆಯಲ್ಲಿನ ಸಾಕ್ಷ್ಯವನ್ನು ಪರಿಗಣಿಸಲು ನಾವು ಉದ್ದೇಶಿಸಿದ್ದೇವೆ.

22. ಪ್ರಸ್ತುತ ಮೊಕದ್ದಮೆಯಲ್ಲಿ, ವಾಹನದ ಮಾಲೀಕನು, ಸ್ವತಃ ಪ್ರ.ಸಾ .1 ಆಗಿ ಪರೀಕ್ಷೆಗೆ ಒಳಪಟ್ಟಿದ್ದಾನೆ ಮತ್ತು ನಿಶಾನೆ ಪ್ರ -1 ರಿಂದ ಪ -6 ರವರೆಗಿನ ದಸ್ತಾವೇಜುಗಳನ್ನು ಗುರುತಿಸಿದ್ದಾನೆ.ಮೊಖ್ಯಾರ್ನಾಮೆಯ (ಅಫಿಡಾವಿಟ್) ಸಾಕ್ಷ್ಯದ 4 ನೇ ಕಂಡಿಕೆಯಲ್ಲಿ, ವಾಹನದ ಮಾಲೀಕನು ಈ ಕೆಳಗಿನಂತೆ ಹೇಳಿಕೆ ನೀಡಿದ್ದಾನೆ:

"4. ನಾನು ನಿವೇದಿಸಿಕೊಳ್ಳುವುದೇನೆಂದರೆ ನಾನು ಅರ್ಥ್ ಮೂವರ್ ವ್ಯವಹಾರವನ್ನು ನಡೆಸುತ್ತಿರುವುದರಿಂದ, ನನ್ನ ವಾಹನಗಳ ಓಡಾಟಕ್ಕೆ ಚಾಲಕರನ್ನು ನಿಯೋಜಿಸಿಕೊಳ್ಳುವಾಗ, ಅವರು ಹೊಂದಿದ ಅವರ ಚಾಲನಾ ಲೈಸೆನ್ಸ್ನ್ನು ಆ ಸಮಯದಲ್ಲಿ ಪರಿಶೀಲಿಸಿದ ನಂತರ ನನ್ನ ಸಮಕ್ಷಮದಲ್ಲಿ ಪರೀಕ್ಷಾರ್ಥ ಚಾಲನೆಯನ್ನು ಕೈಗೊಳ್ಳಲು ಅವರನ್ನು ಒಳಪಡಿಸುವ ಮೂಲಕ ವಾಹನಗಳ ಸದರಿ ವಿಧವನ್ನು ಚಲಾಯಿಸಲು ಅವರಿಗಿರುವ ಸಾಮರ್ಥ್ಯವನ್ನು ತಿಳಿದುಕೊಳ್ಳುವ ಮೂಲಕ ಚಾಲಕರನ್ನು ನೇಮಕ ಮಾಡಿಕೊಳ್ಳುವಲ್ಲಿ ನಾನು ಕಾಳಜಿ ವಹಿಸಿದ್ದೇನೆ ಹಾಗೂ ಸದರಿ ಚಾಲನಾ ಲೈಸೆನ್ಸ್ನ ನೈಜತೆ ಮತ್ತು ಸಿಂಧುತ್ವವನ್ನು ಸ್ವತಃ ಮನವರಿಕೆ ಮಾಡಿಕೊಂಡ ಹಾಗೂ ವಾಹನಗಳನ್ನು ಚಲಾಯಿಸುವಲ್ಲಿ ಅಂಥ ವ್ಯಕ್ತಿಗಳು ಕಾಳಜಿ ಮತ್ತು ಎಚ್ಚರಿಕೆ ವಹಿಸುವರೆಂದು ಹಾಗೂ ಅಂಥ ಚಾಲಕರು ಸದರಿ ವಿಧದ ವಾಹನಗಳನ್ನು ಚಲಾಯಿಸಲು

ಸಮರ್ಥರಾಗಿರುವರೆಂದು ಕಂಡುಕೊಂಡ ನಂತರ, ಅಂಥ ವ್ಯಕ್ತಿಯನ್ನು/ಗಳನ್ನು ಚಾಲಕರನನ್ನಾಗಿ ರನ್ನಾಗಿ ನೇಮಿಸಿಕೊಳ್ಳುತ್ತೇನೆ ಮತ್ತು ಪ್ರಸ್ತುತ ಸಂದರ್ಭದಲ್ಲೂ ಸಹ, ಶ್ರೀ ಸುಭಾಷ್ ಕುಮಾರ್ ಯಾದವ್ ಎಂಬ ಚಾಲಕನು ಇದೇ ಪ್ರಕ್ರಿಯೆಗೆ ಒಳಗಾಗಿದ್ದಾನೆ ಎಂದರೆ, ಶ್ರೀ ಸುಭಾಷ್ ಕುಮಾರ್ ಯಾದವ್ ಸಹ ಭಾರಿ ಸರಕು ವಾಹನಗಳನ್ನು ಚಲಾಯಿಸುವ ಪರೀಕ್ಷಾರ್ಥ ಚಾಲನೆಗೆ ಒಳಗಾಗಿದ್ದಾನೆ; ಸದರಿ ವ್ಯಕ್ತಿಯ ಚಾಲನಾ ಲೈಸೆನ್ಸನ್ನು ಪರಿಶೀಲಿಸಿದ ನಂತರ ಹಾಗೂ ಪ್ರಶ್ನಿತ ಟಿಪ್ಪರ್ ಲಾರಿಯನ್ನು ಚಲಾಯಿಸಲು ಆತನು ನೈಜ ಮತ್ತು ಸಿಂಧುವಾದ ಚಾಲನಾ ಲೈಸೆನ್ಸನ್ನು ಹೊಂದಿದ್ದನು ಎಂಬುದನ್ನು ನಾನು ಸ್ವತಃ ಮನವರಿಕೆ ಮಾಡಿಕೊಂಡ ನಂತರ ಹಾಗೂ ಸದರಿ ಚಾಲಕನು ನಿರ್ಲಕ್ಷ್ಯ ತೋರದೆ ವಾಹನವನ್ನು ಎಚ್ಚರಿಕೆಯಿಂದ, ಜಾಗೃತೆಯಿಂದ ಚಲಾಯಿಸುವನು ಹಾಗೂ ಸದರಿ ಸದರಿ ವಿಧದ ವಿಧದ ವಾಹನವನ್ನು ಚಲಾಯಿಸಲು ಆತನು ಸಮರ್ಥನಾಗಿರುವನು ಎಂದು ಕಂಡುಕೊಂಡ ನಂತರ, ನಾನು ಆತನನ್ನು ನೇಮಕ ಮಾಡಿಕೊಂಡಿದ್ದೇನೆಂದು ಮತ್ತು ಆತನ ಚಾಲನಾ ಲೈಸೆನ್ಸ್ನ ಪ್ರತಿಯನ್ನು ನಾನು ಸಂಗ್ರಹಿಸಿದ್ದೇನೆಂದು ಹಾಗೂ ಸದರಿ ಸಮಯದಲ್ಲಿ ಆತನ ವಶದಲ್ಲಿದ್ದ ಅದನ್ನೇ ಮೂಲ ಚಾಲನಾ ಲೈಸೆನ್ಸ್ ನೊಂದಿಗೆ ಲಗತ್ತಿಸಿದ್ದೇನೆ."

ವಿಮಾ ಕಂಪನಿಯ ಪರವಾಗಿ ನಡೆಸಿದ ಪಾಟಿ ಸವಾಲಿನಲ್ಲಿ, ಈ ಮುಂದಿನಂತೆ ಹೇಳಿಕೆ ನೀಡಲಾಗಿದೆ:

ವಾಹನದ ದಸ್ತಾವೇಜುಗಳನ್ನು ನಾನು ಪೊಲೀಸರಿಗೆ ನೀಡಿದ್ದೇನೆ.ವಿಮಾ ಕಂಪನಿಗೆ ನಾನು ಯಾವುದೇ ದಸ್ತಾವೇಜುಗಳನ್ನು ನೀಡಿರುವುದಿಲ್ಲ.ಚಾಲಕನ ವಿರುದ್ಧ ದಾಖಲಿಸಿದ ಕ್ರಿಮಿನಲ್ ಮೊಕದ್ದಮೆ ಇತ್ಯರ್ಥದಲ್ಲಿದೆ.ಬಿಡುಗಡೆ ಮಾಡಿದ ವಾಹನವನ್ನು ನಾನೇ ಪಡೆದಿರುತ್ತೇನೆ ಎಂಬುದು ಸತ್ಯ. ನಿಶಾನೆ ಪ್ರ.ನ್ನು ನನ್ನ ಚಾಲಕನು ಪಡೆದಿದ್ದಾನೆ.ಚಾಲನಾ ಲೈಸೆನ್ಸ್ನ ಉದ್ಧೃತ ಭಾಗವನ್ನು ನಾನು ಪೊಲೀಸರಿಗೆ ನೀಡಿಲ್ಲ, ಆದರೆ ಚಾಲನಾ ಲೈಸೆನ್ಸಿನ ಪ್ರತಿಯನ್ನು ನಾನು ನೀಡಿದ್ದೆನೆ.ಚಾಲನಾ ಲೈಸೆನ್ಸ್ನ ನವೀಕರಣಕ್ಕಾಗಿ ಸ್ಥಳವಿರುವಲ್ಲಿ ಚಾಲನಾ ಲೈಸೆನ್ಸ್ ಎಂದಿರುವುದನ್ನು ಗಮನಿಸಿದ್ದು, ಅದರಲ್ಲಿ ಎಸ್ಎಲ್.ಸಂಖ್ಯೆ: 7308/2010 ಎಫ್ಟಿಆರ್-ಒಎಸ್ನಲ್ಲಿ ಉಲ್ಲೇಖವಿದ್ದು, ಚಾಲನಾ ಲೈಸೆನ್ಸ್ ಉದ್ಧೃತ ಭಾಗದಲ್ಲಿ ಅದನ್ನು ಎಸ್ಎಲ್.ಸಂಖ್ಯೆ: 7308 ಎಫ್/2010 ಕೆಟಿಆರ್-ಒಎಸ್ ಎಂದು ಉಲ್ಲೇಖಿಸಲಾಗಿದೆ ಎಂಬುದು ಸತ್ಯ. ಚಾಲನಾ ಲೈಸೆನ್ಸ್ನಲ್ಲಿ ಉಲ್ಲೇಖಿಸಿದ ವಿಳಾಸದಲ್ಲಿ ಕತಿಹಾರ್ನ ನಿವಾಸಿ ಎಂದಿದೆ.ಚಾಲನಾ ಲೈಸೆನ್ಸ್ ಪ್ರಕಾರ, ಆತನು ಕತಿಹಾರ್ ಲೈಸೆನ್ಸ್ ನೀಡಿಕೆ ಪ್ರಾಧಿಕಾರದಲ್ಲಿ ಚಾಲನಾ ಲೈಸೆನ್ಸ್ ಪಡೆದಿದ್ದಾನೆ.ಚಾಲನಾ ಲೈಸೆನ್ಸನ್ನು ದಿನಾಂಕ:06.09.2013 ರಿಂದ 27.08.2016 ರವರೆಗಿನ ಅವಧಿಗಾಗಿ ಕತಿಹಾರ್ನಲ್ಲಿ ನವೀಕರಿಸಲಾಗಿದೆ.ದಿನಾಂಕ: 27.08.2016 ರ ನಂತರ ಲೈಸೆನ್ಸ್ನ ನವೀಕರಣದ ಸಂಬಂಧದಲ್ಲಿ ಚಾಲನಾ ಲೈಸೆನ್ಸ್ನಲ್ಲಿ ಯಾವುದೇ ನಮೂದು ಇಲ್ಲ. ಚಾಲನಾ ಲೈಸೆನ್ಸ್ ಜಯನಗರ ಸಂಚಾರಿ ಪೊಲೀಸ್ ಠಾಣೆಯಲ್ಲಿತ್ತು ಎಂದು ಸಾಕ್ಷಿದಾರನು ಸ್ವತಃ ಒಪ್ಪಿಕೊಂಡಿದ್ದಾನೆ ಮತ್ತು ಅದನ್ನೇ ನಿನ್ನೆ ಸಂಗ್ರಹಿಸಲಾಗಿದೆ ಮತ್ತು ಅದರಿಂದಾಗಿ ಅದರಲ್ಲಿ ಯಾವುದೇ ಮುಂದಿನ ನಮೂದುಗಳಿಲ್ಲ. '

23. ವಾಹನದ ಮಾಲೀಕನು ನೀಡಿದ ಸಾಕ್ಷ್ಯವ, ಚಾಲಕನನ್ನು ನಿಯೋಜಿಸಿಕೊಳ್ಳುವ ಸಮಯದಲ್ಲಿ, ಚಾಲನಾ ಲೈಸೆನ್ಸ್ನ ನೈಜತೆ ಮತ್ತು ಸಿಂಧುತ್ವಕ್ಕೆ ಸಂಬಂಧಿಸಿದಂತೆ ಸ್ವತಃ ಮನವರಿಕೆ ಮಾಡಿಕೊಳ್ಳುವ ಸಲುವಾಗಿ ಪ್ರಯತ್ನಪಟ್ಟಿದ್ದಾನೆ ಹಾಗೂ ಆತನ ಚಾಲನಾ ಲೈಸೆನ್ಸ್ನ ಪ್ರತಿಯನ್ನು ಸಹ ಸಂಗ್ರಹಿಸಿದ್ದಾನೆ ಮತ್ತು ಅದನ್ನು ಮೂಲ ಲೈಸೆನ್ಸ್ನೊಂದಿಗೆ ಸಹ ಲಗತ್ತಿಸಿದ್ದಾನೆ ಎಂಬುದನ್ನು ಸಾಕಷ್ಟು ಸ್ಪಷ್ಟವಾಗಿ ತಿಳಿಸುತ್ತದೆ.

ಆರ್.ಡಬ್ಲ್ಯೂ.ಇದರ ಪಾಟಿ ಸವಾಲಿನಲ್ಲಿ, ಅವರ ಸಾಕ್ಷ್ಯವನ್ನು ಸಂದೇಹಿಸಲು ಅಥವಾ ನಕಲಿ ಲೈಸೆನ್ಸ್ನ್ನು ಹೊಂದಿರುವ ವಾಹನವನ್ನು ಚಲಾಯಿಸಲು ಚಾಲಕನಿಗೆ ವಾಹನ ಚಲಾಯಿಸಲು ಅವಕಾಶ ನೀಡುವಲ್ಲಿ ಮಾಲೀಕನ ಕಡೆಯಿಂದ ವಿಫಲತೆಯುಂಟಾಗಿದೆ ಎಂದು ತೋರಿಸಲು ಹೆಚ್ಚಿನ ವಿವರಗಳೇನೂ ಇಲ್ಲ.

24. ಪ್ರ.ಸಾ .2 ಎಂದು ಪರೀಕ್ಷಿಸಲಾದ ವಿಮಾ ಕಂಪನಿಯ ನೌಕರನು ಮೊಮ್ಮಾರ್ನಾಮೆಯ (ಅಫಿಡಾವಿ) 4 ನೇ ಮತ್ತು 5 ನೇ ಕಂಡಿಕೆಗಳಲ್ಲಿ ತಮ್ಮ ಸಾಕ್ಷ್ಯದಲ್ಲಿ ಈ ಕೆಳಗಿನಂತೆ ಹೇಳಿಕೆ ನೀಡಿದ್ದಾರೆ:

"4. ಇದಲ್ಲದೆ ನಾನು ನಿವೇದಿಸಿಕೊಳ್ಳುವುದೇನೆಂದರೆ, ಜಯನಗರ ಸಂಚಾರಿ ಪೊಲೀಸರು, ಅಪರಾಧ (ಕ್ರೈಮ್)ಸಂಖ್ಯೆ: 0002/2016 ರಲ್ಲಿ, ಶ್ರೀ ಸುಭೋಷ್ ಕುಮಾರ್ ಯಾದವ್ ವಿರುದ್ಧ ಆರೋಪ ಪಟ್ಟಿಯನ್ನು ದಾಖಲಿಸಿದ್ದಾರೆ.ಶ್ರೀ ಸುಭೋಷ್ ಕುಮಾರ್ ಯಾದವ್ ಚಾಲನಾ ಲೈಸೆನ್ಸ್ನ ಫೋಟೋ ಪ್ರತಿಯನ್ನು ಪಡೆದುಕೊಂಡು,ದಿನಾಂಕ: 16.09.2016 ರಂದು ಸದರಿ ಚಾಲನಾ ಲೈಸೆನ್ಸ್ನಲ್ಲಿ ಹೇಳಿದಂತೆ ಜಿಲ್ಲಾ ಸಾರಿಗೆ ಅಧಿಕಾರಿ, ಕತಿಹಾರ್, ಬಿಹಾರ್ ರಾಜ್ಯ ಇವರಲ್ಲಿ ಶ್ರೀ ಸುಭೋಷ್ ಕುಮಾರ್ ಯಾದವ್ನ ಚಾಲನಾ ಲೈಸೆನ್ಸ್ನ ಉದ್ಧೃತ ಭಾಗಕ್ಕೆ ನಾವು ಅರ್ಜಿ ಸಲ್ಲಿಸಿದೆವು.ನಮ್ಮ ಅರ್ಜಿಗೆ ಪ್ರತಿಕ್ರಿಯೆಯಾಗಿ, ಜಿಲ್ಲಾ ಸಾರಿಗೆ ಅಧಿಕಾರಿ, ಕತಿಹಾರ್, ಬಿಹಾರ್ ರಾಜ್ಯ ಇವರು, ಚಾಲನಾ ಲೈಸೆನ್ಸ್ಸಂಖ್ಯೆ: 7308/2010 ಎಫ್ ಕೆ.ಟಿ.ಆರ್. ಇದನ್ನು ಶ್ರೀ ಸುಭೋಷ್ ಕುಮಾರ್ ಯಾದವ್ ಹೆಸರಿನಲ್ಲಿ ಅವರ ಕಚೇರಿಯಿಂದ ನೀಡಲಾಗಿಲ್ಲವೆಂದು ಹೇಳಿ ನಮ್ಮ ಸಮೀಕ್ಷೆದಾರರಿಗೆ ಹಿಂಬರಹಸಂಖ್ಯೆ: 690/16,ದಿನಾಂಕ: 22.09.2016 ನ್ನು ನೀಡಿದರು.ಸದರಿ ಹಿಂಬರಹವನ್ನು ಇದರೊಂದಿಗೆ ಹಾಜರುಪಡಿಸಲಾಗಿದೆ.

5. ನಾನು ನಿವೇದಿಸಿಕೊಳ್ಳುವುದೇನೆಂದರೆ, ಟಿಪ್ಪರ್ ಲಾರಿಸಂಖ್ಯೆ: ಕೆಎ-51-ಬಿ -7278 ಇದರ ಚಾಲಕ ಶ್ರೀ ಸುಭೋಷ್ ಕುಮಾರ್ ಯಾದವ್ ಈತನು, ಅದನ್ನು ಚಲಾಯಿಸಲು ಸಿಂಧುವಾದ ಮತ್ತು ಪರಿಣಾಮಕಾರಿ ಚಾಲನಾ ಲೈಸೆನ್ಸ್ ಹೊಂದಿಲ್ಲದ್ದರಿಂದ, ವಾಹನ ಚಲಾಯಿಸಲು ಚಾಲನಾ ಲೈಸೆನ್ಸ್ ಹೊಂದಿರದ ವ್ಯಕ್ತಿಗೆ ಅದನ್ನು ಹಸ್ತಾಂತರಿಸುವಲ್ಲಿ ವಿಮಾ ಪಾಲಿಸಿಯ ಮೂಲ ಷರತ್ತನ್ನೇ ವಿಮೆ ಮಾಡಿಸಿದವನು ಉಲ್ಲಂಘಿಸಿದ್ದಾನೆ.ಮೊದಲ ಪ್ರತ್ಯರ್ಜಿದಾರನು ಪಾಲಿಸಿಯ ಮೂಲ ನಿಬಂಧನೆ ಮತ್ತು ಷರತ್ತುಗಳನ್ನು ಉಲ್ಲಂಘಿಸಿದ ಹಿನ್ನೆಲೆಯಲ್ಲಿ, ವಿಮಾ ಒಪ್ಪಂದದನುಸಾರ ಮೇಲಿನ ಸಂದರ್ಭಧಲ್ಲಿ, ನಮ್ಮ ಕಂಪನಿಯ ಮೊದಲ ಪ್ರತ್ಯರ್ಜಿದಾರನ ನಷ್ಟಭರ್ತಿ ಮಾಡಿಕೊಡುವ ಅಗತ್ಯವಿಲ್ಲ."

ಪಾಟಿ-ಸವಾಲಿನಲ್ಲಿ, ವಿಮಾ ಕಂಪನಿಯು, ಚಾಲಕನಿಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ ಮತ್ತು ಚಾಲನಾ ಲೈಸೆನ್ಸ್ನ ಪ್ರತಿಯನ್ನು ಸಂಗ್ರಹಿಸಿರುವುದಿಲ್ಲವೆಂದು ಹಾಗೂ ಕಂಪನಿಯ ತನಿಖಾಧಿಕಾರಿಯು, ಮಾಲೀಕನ ಹೇಳಿಕೆಯನ್ನು ದಾಖಲಿಸಿರುವುದಿಲ್ಲ ಮತ್ತು ಚಾಲನಾ ಲೈಸೆನ್ಸ್ನ್ನು ಸಂಗ್ರಹಿಸಿರುವುದಿಲ್ಲ ಎಂದು ಅವರು ಒಪ್ಪಿಕೊಂಡಿದ್ದಾರೆ.ಇದಲ್ಲದೆ ಅವರು, ಚಾಲನಾ ಲೈಸೆನ್ಸ್ಗೆ ಅರ್ಜಿ ಸಲ್ಲಿಸುವಾಗ, ಚಾಲನಾ ಲೈಸೆನ್ಸ್ನ ಸಂಖ್ಯೆಯನ್ನು 7308/2010 ಎಫ್ ಕೆಟಿಆರ್ ಎಂದು ಉಲ್ಲೇಖಿಸಲಾಗಿದೆ ಹಾಗೂ ನಿಶಾನೆ ಪ್ರ -5 ಮತ್ತು ಪ್ರ -6 ರಲ್ಲಿ, ಕ್ರಮ ಸಂಖ್ಯೆಯನ್ನು 7308 ಎಫ್/2010 ಎಫ್ ಕೆಟಿಆರ್ ಎಂದು ಉಲ್ಲೇಖಿಸಲಾಗಿದೆ ಎಂದು ಒಪ್ಪಿಕೊಂಡಿದ್ದಾರೆ.ತಮ್ಮ ಪತ್ರದಲ್ಲಿ, ಚಾಲನಾ ಲೈಸೆನ್ಸ್ ಸಂಖ್ಯೆಯನ್ನು 7308/2010 ಎಫ್ ಕೆಟಿಆರ್ ಎಂದು ಉಲ್ಲೇಖಿಸಿದ್ದಾರೆಂಬುದನ್ನು ಅವರು ಒಪ್ಪಿಕೊಂಡಿದ್ದಾರೆ.ಇದಲ್ಲದೆ ಅವರು, ಚಾಲನಾ ಲೈಸೆನ್ಸ್ ಗಾಗಿ ಛತ್ರ ಆರ್‌ಟಿಓ ಕಚೇರಿಗೆ ಅರ್ಜಿ ಸಲ್ಲಿಸಿದ್ದರೆಂದು ಹೇಳಿದ್ದು, ಚಾಲನಾ ಲೈಸೆನ್ಸ್ನ ಉದ್ಧೃತ ಭಾಗವನ್ನು ಅವರು

ಸ್ವೀಕರಿಸಿದ್ದಾರಾದರೂ, ಅದು ಆಪಾದಿತ ವಾಹನದ ಚಾಲಕನಿಗೆ ಸಂಬಂಧಿಸಿಲ್ಲ (ಚಾಲನಾ ಲೈಸೆನ್ಸ್ನ ಉದ್ಧೃತ ಭಾಗದ ಸದರಿ ಪ್ರತಿಯನ್ನು ಸಹ ಹಾಜರುಪಡಿಸಿರುವುದಿಲ್ಲ)

25. ನಿಶಾನೆ ಪ -5 ಎಂದು ಗುರುತಿಸಿದ ವಾಹನದ ಚಾಲಕನ ಚಾಲನಾ ಲೈಸೆನ್ಸನ್ನು ಸಂಬಂಧಪಟ್ಟ ಡಿಟಿಒ ಪ್ರಾಧಿಕಾರವು ನೀಡಿಲ್ಲ ಮತ್ತು ನಕಲಿ ಲೈಸೆನ್ಸ್ ಎಂಬ ವಿಮಾ ಕಂಪನಿಯ ಪ್ರತಿವಾದವನ್ನು ಸಾಬೀತುಪಡಿಸುವ ಉದ್ದೇಶಕ್ಕಾಗಿ, ಕತಿಹಾರ್ನ ಜಿಲ್ಲಾ ಸಾರಿಗೆ ಕಚೇರಿ (ಡಿಟಿಒ) ಯ ಸಿಬ್ಬಂದಿಯನ್ನು ಅದು ಸಮನು ಮಾಡಿದೆ.ಪ್ರ.ಸಾ. 3 ಇವರು, ವಿಮಾ ಕಂಪನಿಯು ಸಮನು ಮಾಡಿದ ಸಾಕ್ಷಿದಾರರಾಗಿ ಸಾಕ್ಷ್ಯ ಎಂ ನೀಡಲು ಡಿಟಿಒ ಕತಿಹಾರ್ ನಿಯೋಜಿಸಿದ ಸಿಬ್ಬಂದಿಯಾಗಿದ್ದಾರೆ.ನಿಶಾನೆ ಪ್ರ -9 ನ್ನು, ಕತಿಹಾರ್ನ ಜಿಲ್ಲಾ ಸಾರಿಗೆ ಅಧಿಕಾರಿಗಳ ಕಚೇರಿಯು ನೀಡಿದ್ದು, ಅದು ಜಿಲ್ಲಾ ಸಾರಿಗೆ ಅಧಿಕಾರಿಯ ಸಹಿಯನ್ನು ಒಳಗೊಂಡಿದೆ ಹಾಗೂ ಕೋರಿಕೆ ಪತ್ರದಲ್ಲಿ ಉಲ್ಲೇಖಿಸಿರುವ ಚಾಲನಾ ಲೈಸೆನ್ಸ್ ಸಂಖ್ಯೆಯನ್ನು ಅವರ ಕಚೇರಿಯು ನೀಡಿಲ್ಲವೆಂದು; ಅದನ್ನು ನಿಶಾನೆ ಪ್ರ -9 ನಲ್ಲಿ ಉಲ್ಲೇಖಿಸಲಾಗಿದೆ.ಅವರು,ಸಂಖ್ಯೆ: 4388/2010 ವರೆಗೆ ಚಾಲನಾ ಲೈಸೆನ್ಸ್ಗಳನ್ನು ನೀಡಿದ್ದಾರೆಯೇ ಹೊರತುಸಂಖ್ಯೆ: 7308/2010 ರವರೆಗೆ ಚಾಲನಾ ಲೈಸೆನ್ಸ್ಗಳನ್ನು ನೀಡಿಲ್ಲವೆಂದು ಹೇಳಿದ್ದಾರೆ.ಡಿಟಿಒ ಕಚೇರಿಯು ಪತ್ರದಿನಾಂಕ: 21.03.2017 ನ್ನು ನೀಡಿದೆ ಎಂದು ಮತ್ತು ಅಂಥ ಯಾವುದೇ ಲೈಸೆನ್ಸನ್ನು ಅವರ ಕಚೇರಿಯು ನೀಡಿಲ್ಲವೆಂದು ಅವರು ಒಪ್ಪಿಕೊಂಡಿದ್ದಾರೆ.

ಪಾಟಿ ಸವಾಲಿನಲ್ಲಿ ಅವರು, ನಿಶಾನೆ ಪ್ರ -5 ರಲ್ಲಿ ಕಂಡುಬಂದ ಸಹಿಯು, ಅವರ ಪ್ರಸ್ತುತ ಅಧಿಕಾರಿಯ ಸಹಿಯಲ್ಲವೆಂದು ಹೇಳಿದ್ದಾರೆ.ನಿಶಾನೆ ಪ್ರ -5 ರ ಪ್ರಕಾರ, ಇದನ್ನು 2010 ನೇ ಇಸವಿಯಲ್ಲಿ ನೀಡಲಾಗಿದೆ.ಮೊದಲನೆಯದಾಗಿ, ಛತ್ರ ಡಿಟಿಒನಸಂಖ್ಯೆ: 6265/2007 ನ್ನು ಹೊಂದಿರುವ ಚಾಲನಾ ಲೈಸೆನ್ಸ್ ಪಡೆಯುವ ಬಗ್ಗೆ ಅವರಿಗೆ ಹೇಳಲಾಗಲಿಲ್ಲ.ನಿಶಾನೆ ಪ್ರ -6 ನ್ನು ಅವರ ಕಚೇರಿಯು ನೀಡಿದೆ ಎಂಬ ಸೂಚನೆಯನ್ನು ಅವರು ಅಲ್ಲಗಳೆದರು ಮತ್ತು ಡಿಟಿಒ ಅವರು ನಿಶಾನೆ ಪ್ರ -10 ಕ್ಕೆ ಮತ್ತು ಪ -11 ಕ್ಕೆ ಸಹಿ ಮಾಡಿದ್ದಾರೆಯೇ ಹೊರತು ನಿಶಾನೆ ಪ್ರ -6 ಕ್ಕೆ ಸಹಿ ಮಾಡಿಲ್ಲವೆಂದು ಹೇಳಿದರು.ಇದಲ್ಲದೆ ಅವರು, ಯಾರಾದರೂ ಅರ್ಜಿದಾರನು ಇನ್ನೊಂದು ರಾಜ್ಯದಲ್ಲಿ ಚಾಲನಾ ಲೈಸೆನ್ಸನ್ನು ನವೀಕರಿಸಲು ಬಯಸಿದ್ದರೆ, ಅವರು ನಿರಾಕ್ಷೇಪಣಾ ಪತ್ರವನ್ನು ನೀಡುವುದಾಗಿ ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.ಚಾಲನಾ ಲೈಸೆನ್ಸ್ನ ನೈಜತೆ ಬಗ್ಗೆ ಪೊಲೀಸರಿಂದ ಯಾವುದೇ ಪತ್ರವನ್ನು ತಾವು ೧ ಸ್ವೀಕರಿಸಿಲ್ಲವೆಂದು ಹಾಗೂ ನಿಶಾನೆ ಪ್ರ -9 ನ್ನು ನೀಡಿದ ನಂತರ ಅಥವಾ ಚಾಲನಾ ಲೈಸೆನ್ಸ್ ನಕಲಿ ಎಂದು ಅವರ ಗಮನಕ್ಕೆ ಬಂದಾಗ, ಲಾರಿಯ ಚಾಲಕನ ವಿರುದ್ಧ ಯಾವುದೇ ಕ್ರಮವನ್ನು ಅವರು ಪ್ರಾರಂಭಿಸಿಲ್ಲವೆಂದು ಅವರು ಒಪ್ಪಿಕೊಂಡರು.

26. ಟಿಪ್ಪರ್ ಲಾರಿಯ ಚಾಲಕನು ಹೊಂದಿರುವ ಚಾಲನಾ ಲೈಸೆನ್ಸ್, ನಕಲಿ ಲೈಸೆನ್ಸ್ ಮತ್ತು ಅದನ್ನು ಡಿಟಿಒ, ಕತಿಹಾರ್ ನೀಡಿದ್ದಾರೆ ಎಂಬುದು ವಿಮಾ ಕ ಂ ಪನಿಯ ವಾದವಾಗಿದೆ.

27. ನಿಶಾನೆ ಪ -5 ಎಂದು ಗುರುತಿಸಿರುವ, ಚಾಲನಾ ಲೈಸೆನ್ಸ್ಸಂಖ್ಯೆ: 6265/2007 ನ ವಿಪತ್ರ ಪ್ರಮಾಣಕ ಪ್ರತಿಯ ವಿಷಯಾಂಶಗಳಿಂದ, ಅದನ್ನು ಮೊದಲು ಆರ್ಟಿಒ ಛತ್ರ ಜಿಲ್ಲೆಯುದಿನಾಂಕ: 28.05.2007 ರಂದು ನೀಡಿದೆ ಎಂದು ಕಂಡುಬಂದಿದೆ.ಚಾಲನಾ ಲೈಸೆನ್ಸ್ನಲ್ಲಿ ತೋರಿಸಿದ ವಿಳಾಸವು, ಆನಂದಪುರ, ಪಿಎಸ್ ಲಕ್ಷ್ಮೀಪುರ, ಎ/ಪಿ ಶಾಂತಿ ಕುಂಜ ಮುಖ್ಯ ರಸ್ತೆ, ಕತಿಹಾರ್ ಎಂದಿದೆ.ಹೀಗಾಗಿ, ಚಾಲಕನು ಕತಿಹಾರ್ನ ನಿವಾಸಿಯಾಗಿದ್ದರೂ ಸಹ, ಆರ್ಟಿಒ ಛತ್ರ ಜಿಲ್ಲೆಯಿಂದ ಆತನ ಲೈಸೆನ್ಸನ್ನು ಪಡೆದುಕೊಂಡಿದ್ದಾನೆಂಬುದು ರುಜುವಾತಾಗಿದೆ.ತರುವಾಯ ಆತನು ಡಿಟಿಒ ಕತಿಹಾರ್ನಲ್ಲಿ ಅದನ್ನು ನವೀಕರಿಸಿಕೊಂಡಿದ್ದಾನೆ.ಸದರಿ ಚಾಲನಾ ಲೈಸೆನ್ಸನ್ನು 27.05.2010

ರಿಂದ 27.08.2013 ರವರೆಗೆ ನವೀಕರಿಸಲಾಗಿದ್ದು, ತರುವಾಯ, ಅದನ್ನು 27.08.2016 ರವರೆಗೆ ನವೀಕರಿಸಲಾಗಿತ್ತು.

28. ನಿಶಾನೆ ಪ -6 ಇದು, ಟಿಪ್ಪರ್ ಲಾರಿ ಚಾಲಕನಾದ ಶ್ರೀ ಸುಭಾಷ್ ಕುಮಾರ್ ಯಾದವ್ ನೀಡಿದ ಪತ್ರ/ಅರ್ಜಿಗೆ ಪ್ರತಿಯಾಗಿ ಡಿಟಿಓ ಕತಿಹಾರ್ ನೀಡಿದ ಪ್ರಮಾಣಪತ್ರವಾಗಿದೆ.ಚಾಲನಾ ಲೈಸೆನ್ಸ್ ಸಂಖ್ಯೆ.6265/2007 ಛತ್ರ, ಎಸ್‌ಎಲ್ಸಂಖ್ಯೆ: 7308 ಎಫ್/2010 ಕತಿಹಾರ್ ಇದನ್ನು 28.05.2007 ರಿಂದ 27.05.2010 ರವರೆಗೆ, 28.08.2010 ರಿಂದ 27.08.2013 ರವರೆಗೆ, 28.08.2013 ರಿಂದ 27.08.2016 ರವರೆಗೆ ಹಾಗೂ ತರುವಾಯ 28.08.2016 ರಿಂದ 27.08.2019 ರವರೆಗೆ ನವೀಕರಿಸಲಾಗಿತ್ತು ಎಂಬುದು ಸದರಿ ದಸ್ತಾವೇಜಿನಿಂದ ತಿಳಿದುಬರುತ್ತದೆ.

29. ನಿಶಾನೆ ಪ್ರ -9 ಇದು, ಇಸ್ಕೊ-ಟೋಕಿಯೋ ಜನರಲ್ ಇನ್ಸುರೆನ್ಸ್ ಕಂಪನಿ ಇದರ ಸರ್ವೇಯರ್ ಪ್ರವೀಣ್ ಕುಮಾರು ಅವರು ಸಲ್ಲಿಸಿದದಿನಾಂಕ: 16.09.2016 ರ ಪತ್ರಕ್ಕೆ ಪ್ರತಿಯಾಗಿ ಡಿಟಿಓ ಕತಿಹಾರ್ ನೀಡಿದದಿನಾಂಕ: 22.09.2016 ರ ಪತ್ರವಾಗಿದ್ದು, ಅದರಲ್ಲಿ ಸುಭಾಷ್ ಕುಮಾರ್ ಯಾದವ್ಗೆ ಸೇರಿದ ಡಿಎಲ್ಸಂಖ್ಯೆ: 7308/2010 ಎಫ್ ಕೆ.ಟಿ.ಆರ್. ಇದು, ಡಿಟಿಓ ಕತಿಹಾರ್ ಕಚೇರಿಯ ದಾಖಲೆಗಳಲ್ಲಿ ಕಂಡುಬಂದಿಲ್ಲವೆಂದು ಉಲ್ಲೇಖಿಸಲಾಗಿದೆ.ನಿಶಾನೆ ಪ -9 ಇದರಲ್ಲಿ, ಡಿಎಲ್ಸಂಖ್ಯೆ: 6265/2007 ಛತ್ರ ಇದರ ಬಗ್ಗೆ ಯಾವುದೇ ಉಲ್ಲೇಖವಿಲ್ಲವೆಂದು ಗಮನಿಸುವುದು ಸುಸಂಗತ, ಡಿಎಲ್ಸಂಖ್ಯೆ: 7308/2010 ಎಫ್ ಕೆ.ಟಿ.ಆರ್. ಇದು, ಡಿಟಿಓ ಕತಿಹಾರ್ ಕಚೇರಿಯ ದಾಖಲೆಗಳಲ್ಲಿ ಕಂಡುಬಂದಿಲ್ಲವೆಂದು ಮಾತ್ರ ಹೇಳಲಾಗಿದೆ.

30. ಪ್ರಸ್ತುತ ಸಂದರ್ಭದಲ್ಲಿ, ವಿಮಾ ಕಂಪನಿಯು, ಡಿಟಿಓ ಕತಿಹಾರ್ನ ಸಿಬ್ಬಂದಿಯನ್ನು ಸಮನು ಮಾಡಿದೆ.ಸಾಕ್ಷಿದಾರರನ್ನು ಸಮನು ಮಾಡುವುದಕ್ಕೆ ಸಲ್ಲಿಸಿದ ಅರ್ಜಿಯು, ಡಿಎಲ್ಸಂಖ್ಯೆ: 6265/2007 ಛತ್ರ ಇದರ ಬಗ್ಗೆ ತಿಳಿಸುವುದಿಲ್ಲ.ಮುಖ್ಯ ನ್ಯಾಯಾಧೀಶರು, ಲಘು ವಿವಾದಗಳ ನ್ಯಾಯಾಲಯ, ಬೆಂಗಳೂರು ಇವರು ಹೊರಡಿಸಿದ ಜಾಮೀನೀಯ ವಾರಂಟು/ಸಮನುಗಳ ಛಾಯಾಪ್ರತಿಯು, ಸಾಕ್ಷಿದಾರರು, ಸುಭಾಷ್ ಕುಮಾರ್ ಯಾದವ್ ಅವರ ಡಿಎಲ್ಸಂಖ್ಯೆ: 7308/2010 ಎಫ್ ಕೆ.ಟಿ.ಆರ್.ನ ಸಂಬಂಧದಲ್ಲಿ ಡಿಟಿಓ, ಕತಿಹಾರ್ ಅವರು ನೀಡಿದ ಹಿಂಬರಹಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ಎ ನೀಡಲು ನಿರ್ದೇಶಿಸುತ್ತದೆ ಎಂಬುದನ್ನು ಬಹಿರಂಗಪಡಿಸುತ್ತದೆ.

ಹೀಗಾಗಿ, ಮೊದಲಿನ ಚಾಲನಾ ಲೈಸೆನ್ಸ್ ಎಂದರೆ, ಡಿಎಲ್ಸಂಖ್ಯೆ: 6265/2007 ಛತ್ರ ಹಾಗೂ ಹ್ಯಾಂಡ್ ಸಮನ್ಸ್ಗಳಲ್ಲಿ/ಜಾಮೀನೀಯ ವಾರಂಟಿನಲ್ಲಿ ತೋರಿಸಿದ ಚಾಲನಾ ಲೈಸೆನ್ಸ್ ಸಂಖ್ಯೆ ನಡುವೆ ಸ್ಪಷ್ಟ ವ್ಯತ್ಯಾಸವಿದೆ ಎಂಬುದು ರುಜುವಾತಾಗುತ್ತದೆ.ಸರಿಯಾದ ಡಿಎಲ್ ಸಂಖ್ಯೆಯನ್ನು ಉಲ್ಲೇಖಿಸುವಲ್ಲಿನ ಸ್ಪಷ್ಟತೆಯ ಕೊರತೆಯಿಂದಾಗಿ, ಪ್ರ.ಸಾ .3 ಇವರು, ಡಿಎಲ್ಸಂಖ್ಯೆ: 7308/2010 ಎಫ್ ಕೆ.ಟಿ.ಆರ್. ನೀಡುವುದಕ್ಕೆ ಸಂಬಂಧಿಸಿದಂತೆ ಕಚೇರಿಯಲ್ಲಿ ಯಾವುದೇ ದಾಖಲೆಗಳು ಲಭ್ಯವಿಲ್ಲವೆಂದು ಸಾಕ್ಷ್ಯ ನೀಡಿದ್ದಾರೆ.ವಿಮಾ ಕಂಪನಿಯ ಮಾನ್ಯ ನ್ಯಾಯವಾದಿಗಳ ನಿವೇದನೆಯನುಸಾರ, ಒಂದು ಜಿಲ್ಲೆಯ ಆರ್ಟಿಓ/ಡಿಟಿಓ ಅವರು ನೀಡಿದ ಲೈಸೆನ್ಸನ್ನು, ಯಾವುದೇ ಇತರ ಜಿಲ್ಲೆಯಲ್ಲಿ ನವೀಕರಿಸಬಹುದಾಗಿದೆ ಮತ್ತು ನವೀಕರಣದ ನಂತರ ಡಿಎಲ್ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಇರಬಾರದು.

31. ಅಧಿನಿಯಮದ 19 ( ಇ) ಪ್ರಕರಣದ ಸುಸಂಗತ ಉಪಬಂಧದನುಸಾರ, ವಿಮಾದಾರನು, ನಕಲಿ ಚಾಲನಾ ಲೈಸೆನ್ಸ್ ಹೊಂದಿರುವ ಚಾಲಕನ ವಿರುದ್ಧ ಕ್ರಮ ಪ್ರಾರಂಭಿಸಬಹುದಾದರೂ, ಪ್ರಸ್ತುತ ಸಂದರ್ಭದಲ್ಲಿ ವಿಮಾ

ಕಂಪನಿಯು ಅಂಥ ಯಾವುದೇ ಪ್ರಯತ್ನಗಳನ್ನು ಮಾಡಿರುವುದಿಲ್ಲವೆಂಬುದನ್ನು ಗಮನಿಸುವುದು ಸುಸಂಗತವಾಗಿದೆ.ಪ್ರ.ಸಾ. 3 ಇವರ ಸಾಕ್ಷ್ಯ ಎಂ ಮತ್ತು ವಿಮಾ ಕಂಪನಿಯು ಹಾಜರುಪಡಿಸಿದ ದಸ್ತಾವೇಜುಗಳು, ಶ್ರೀ ಸುಭಾಷ್ ಕುಮಾರ್ ಯಾದವ್ ಎಂಬ ಹೆಸರಿನ ಟಿಪ್ಪರ್ ಲಾರಿ ಚಾಲಕನು ಹೊಂದಿರುವ ಚಾಲನಾ ಲೈಸೆನ್ಸ್, ನಕಲಿ ಲೈಸೆನ್ಸ್ ಎಂಬ ಪ್ರತಿರೋಧಿಸಲಾಗದ ನಿರ್ಣಯಕ್ಕೆ ಕಾರಣವಾಗುವುದಿಲ್ಲ.

32. ವಾದಗಳು ನಡೆಯುತ್ತಿದ್ದ ಅವಧಿಯಲ್ಲಿ, ವಿಮಾ ಕಂಪನಿಯ ಪರ ಮಾನ್ಯ ನ್ಯಾಯವಾದಿಗಳು, ಅಪಘಾತದಲ್ಲಿ ತೊಡಗಿದ್ದ ವಾಹನದ ಚಾಲಕನನ್ನು, ವಾಹನದ ಮಾಲೀಕನು ಪರೀಕ್ಷಿಸಿಲ್ಲ ಎಂದು ಹೇಳುವ ಮೂಲಕ ಸಂಶಯಾಸ್ಪದ ಸಂದರ್ಭಗಳ ಕಡೆಗೆ ಗಮನ ಸೆಳೆಯಲು ಪ್ರಯತ್ನಿಸಿರುವರಾದರೂ, ವಾಹನದ ಚಾಲಕನನ್ನು ಪರೀಕ್ಷಿಸದಿರುವುದು, ಪ್ರ.ಸಾ .1 ವಾಹನದ ಮಾಲೀಕ ಇವರ ಸಾಕ್ಷ್ಯವನ್ನು ನಂಬದಿರಲು ಸ್ಪಷ್ಟ ಕಾರಣವಾಗುವುದಿಲ್ಲ.

33. ಮೌಖಿಕ ಮತ್ತು ದಾಖಲೆಯಲ್ಲಿ ಮಂಡಿಸಿದ ಸಾಕ್ಷ್ಯವನ್ನು ಸಂಪೂರ್ಣವಾಗಿ ವಿಶ್ಲೇಷಿಸಿದ ನಂತರ, ವಿಮಾ ಪಾಲಿಸಿ ಷರತ್ತುಗಳನ್ನು ಉಲ್ಲಂಘಿಸಿಲ್ಲವೆಂದು ತೋರಿಸಲು ಲಾರಿಯ ಮಾಲೀಕನು, ತರ್ಕಬದ್ಧ ಸಾಕ್ಷ್ಯವನ್ನು ಮಂಡಿಸಿದ್ದಾನೆಂಬುದು ನಮ್ಮ ಅಭಿಪ್ರಾಯವಾಗಿದೆ.ಟಿಪ್ಪರ್ ಲಾರಿಯ ಚಾಲಕನು ಹೊಂದಿರುವ ಡ್ರೈವಿಂಗ್ ಲೈಸೆನ್ಸ್ ನಕಲಿ ಲೈಸೆನ್ಸ್ ಆಗಿದ್ದು, ಹಾಗೆಂದು ವಿಮಾ ಪಾಲಿಸಿ ಷರತ್ತುಗಳ ಉಲ್ಲಂಘನೆಯಾಗಿದೆ ಎಂಬ ವಿಮಾ ಕಂಪನಿಯ ವಾದಗಳನ್ನು ಸಾಬೀತುಪಡಿಸುವ ಸಾಕ್ಷ್ಯವು ತೃಪ್ತಿದಾಯಕವಾಗಿಲ್ಲ.ವಾಹನದ ವಿಮಾದಾರನ ಹೊಣೆಗಾರಿಕೆಯನ್ನು ಹೊರಿಸುವಲ್ಲಿ ನ್ಯಾಯಾಧಿಕರಣವು ನೀಡಿದ ನಿರ್ಣಯಗಳಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಸಿಂಧುವಾದ ಕಾರಣಗಳಿರುವುದಿಲ್ಲ.ಆದ್ದರಿಂದ ವಿಷಯಾಂಶ ಸಂಖ್ಯೆ 1 ಕ್ಕೆ ತದನುಸಾರವಾಗಿ ಉತ್ತರಿಸಲಾಗಿದೆ.

34. ವಿಷಯಾಂಶ ಸಂಖ್ಯೆ.- 2:ಪರಿಹಾರದ ಗಣನೆಗೆ ಸಂಬಂಧಿಸಿದಂತೆ, ಕೇಮುದಾರರ ಪರ ಮಾನ್ಯ ನ್ಯಾಯವಾದಿಗಳು, ನಿಶಾನೆ ಪಿ -45 ನ್ನು ಉಲ್ಲೇಖಿಸಿ, ಆದಾಯ ನಷ್ಟವನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ, ಮೃತನು ವಂತಿಗೆ ನೀಡಿದ ಭವಿಷ್ಯ ನಿಧಿಯ ಮೊತ್ತವಾದ 3,504/- ರೂ.ಗಳನ್ನು ವೇತನಕ್ಕೆ ಸೇರಿಸುವ ಅಗತ್ಯವಿದ್ದು, ಆದರೆ ನ್ಯಾಯಾಧಿಕಾರಣವು ಇದನ್ನು ಪರಿಗಣಿಸಿಲ್ಲವೆಂದು ವಾದಿಸಿದ್ದಾರೆ.ಸರಳ ವರ್ಮ ಮತ್ತು ಇತರರು -ವಿರುದ್ದ-ದೆಹಲಿ ಸಾರಿಗೆ ನಿಗಮ್ ಮೊಕದ್ದಮೆಯಲ್ಲಿ ವಿಧಿಸಿದ ಮಾರ್ಗಸೂಚಿಗಳ ಹಿನ್ನೆಲೆಯಲ್ಲಿ, ನಿವ್ವಳ ಆದಾಯಕ್ಕೆ ಬರಲು ವೇತನದಿಂದ ಆದಾಯ ತೆರಿಗೆ ಮತ್ತು ವೃತ್ತಿ ತೆರಿಗೆಗಳನ್ನು ಮಾತ್ರವೇ ಕಡಿತಗೊಳಿಸಬೇಕಾಗುತ್ತದೆ.

35. ಅವಲಂಬನೆ ನಷ್ಟ ಶೀರ್ಷಿಕೆಯಡಿ ಸಂದಾಯನೀಯ ಪರಿಹಾರದ ಪ್ರಮಾಣವನ್ನು ನಿರ್ಧರಿಸುವಲ್ಲಿ, ನ್ಯಾಯಾಧಿಕರಣವು ತಪ್ಪೆಸಗಿದೆ ಎಂದು ವಿಮಾ ಕಂಪನಿ ಪರ ಮಾನ್ಯ ನ್ಯಾಯವಾದಿಗಳು ಪಟ್ಟು ಬಿಡದೆ ವಾದಿಸಿದ್ದಾರೆ.ರಾಷ್ಟ್ರೀಯ ವಿಮಾ ಕಂಪನಿ ನಿಯಮಿತ -ವಿರುದ್ದ ಪ್ರಣಯ್ ಸೇಥಿ ಮತ್ತು ಇತರರು ಎಐಆರ್ 2017 ಎಸ್ಸಿ 5157 ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮಗಳ ಚ ಹಿನ್ನೆಲೆಯಲ್ಲಿ, ಮೃತನು ಕಂಪನಿಯಲ್ಲಿ ಕಾರನಿರ್ವಹಿಸುತ್ತಿದ್ದುದ್ದರಿಂದ ಹಾಗೂ ಅದು ಖಾಯಂ ಉದ್ಯೋಗವಲ್ಲದ್ದರಿಂದ, ಅವಲಂಬನೆಯ ನಷ್ಟವಾಗಿ ನ್ಯಾಯಾಧಿಕರಣವ 50% ಕ್ಕೆ ಬದಲಾಗಿ 40% ಎಂದು ತೆಗೆದುಕೊಳ್ಳಬೇಕಿತ್ತು ಅಥವಾ ಸೇರಿಸಬೇಕಿತ್ತು.61(iii) ನೇ ಕಂಡಿಕೆಯಲ್ಲಿ ಅದು, ಆದಾಯವನ್ನು ನಿರ್ಧರಿಸುವಾಗ, ಮೃತನು ಖಾಯಂ ಕೆಲಸ ಹೊಂದಿದ್ದಲ್ಲಿ ಮತ್ತು 40 ವರ್ಷಗಳಿಗಿಂತ ಕಡಿಮೆ

ವಯೋಮಾನದವನಾಗಿದ್ದಲ್ಲಿ, ಭವಿಷ್ಯದ ನಿರೀಕ್ಷೆಗಳೆಡೆಗೆ ಮೃತನ ಆದಾಯಕ್ಕೆ ವಾಸ್ತವ ವೇತನದ 50% ರಷ್ಟನ್ನು ಸೇರಿಸಬೇಕೆಂದು ಹಾಗೂ ಮೃತನ ವಯಸ್ಸು 40 ರಿಂದ 50 ವರ್ಷಗಳ ನಡುವಿದ್ದರೆ 30% ರಷ್ಟನ್ನು ಸೇರಿಸಬೇಕೆಂದು ಮೃತನ ವಯಸ್ಸು 50 ರಿಂದ 60 ರ ನಡುವಿದ್ದರೆ, 15% ರಷ್ಟನ್ನು ಸೇರಿಸಬೇಕೆಂದು, ವಾಸ್ತವ ವೇತನವನ್ನು, ತೆರಿಗೆ ಕಡಿತಗೊಳಿಸಿದ ವಾಸ್ತವ ವೇತನವೆಂದು ಓದಬೇಕು ಎಂದು ಅಭಿಪ್ರಾಯಪಟ್ಟಿದೆ.

36. ಮೃತನು ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದನು ಎಂಬುದು ಒಪ್ಪಿತ ಸಂಗತಿ.ಸಾಮಾನ್ಯವಾಗಿ, ಖಾಸಗಿ ಕಂಪನಿಗಳಲ್ಲಿನ ಸೇವೆಯನ್ನು ಸರ್ಕಾರಿ ಸೇವೆಯೊಂದಿಗೆ ಹೋಲಿಸಲಾಗುವುದಿಲ್ಲ.ಮತ್ತು ಖಾಸಗಿ ಸೇವೆಗಳನ್ನು ಕೊನೆಗೊಳಿಸಬಹುದಾದ ಅಥವಾ ಅವು ಕರಾರುಜನ್ಯ ನಿಯೋಜನೆಯಾಗಿರುವುದರಿಂದ ಕಂಪನಿಗಳು ಕೊನೆಗೊಂಡಾಗ ಅವು ಕೊನೆಗೊಳ್ಳಬಹುದಾದ ಸಂಭವವಿರುತ್ತದೆ.ನಿಶಾನೆ ಪಿ -26 ಪ್ರಕಾರ, 01.04.1976 ರಂದು ಮೃತನು ಜನಿಸಿದ್ದು, 05.01.2016 ರಂದು ಅಪಘಾತ ಸಂಭವಿಸಿದೆ ಎಂದಾದರೆ, ಆತನು 40 ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿರುವುದಿಲ್ಲ.ಈ ಸಂಗತಿಯನ್ನು ಪರಿಗಣಿಸಿ, ಭವಿಷ್ಯದ ನಿರೀಕ್ಷೆಯೆಡೆಗೆ ಮೃತನ ಆದಾಯಕ್ಕೆ ವಾಸ್ತವ ವೇತನದ 50% ರಷ್ಟು ಮೊತ್ತವನ್ನು ನ್ಯಾಯಾಧಿಕರಣವು ಸೇರಿಸಿದೆ.

37. ದಾಖಲೆಯಲ್ಲಿ ಮಂಡಿಸಿದ ಸಾಕ್ಷ್ಯದಿಂದ, ಮೃತನು 2013 ರಿಂದ ಎಂಫಾಸಿಸ್ ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದನು ಮತ್ತು ಆತನ ವೇತನದಲ್ಲಿ ಹೆಚ್ಚಳವಾಗಿತ್ತು ಎಂದು ತಿಳಿದುಬರುತ್ತದೆ.ನಿಶಾನೆ ಪಿ -28 ವೇತನ ಪ್ರಮಾಣಪತ್ರವಾಗಿದ್ದು, ಈ ದಸ್ತಾವೇಜಿನ ಪ್ರಕಾರ, ಆತನ ನಿವ್ವಳ ಆದಾಯ 96,144/- ರೂ.ಗಳಾಗಿದೆ.ನಿಶಾನೆ ಪಿ -27 ಇದು ನಿಯೋಜಕ ಕಂಪನಿಯು ನೀಡಿದ ಪತ್ರವಾಗಿದೆ.ಸೇವೆಯಿಂದ ನಿವೃತ್ತಿ ಹೊಂದುವ ವಯಸ್ಸು ತಲುಪಲು ಅರವತ್ತು ವರ್ಷಗಳು ಪೂರ್ಣಗೊಳ್ಳಬೇಕೆಂದು ನಿಯೋಜನೆಯ ನಿಬಂಧನೆಗಳ 17 ನೇ ಖಂಡದಿಂದ ತಿಳಿದುಬರುತ್ತದೆ.ಆದಾಗ್ಯೂ, ಸೇವಾವಾಧಿಯಲ್ಲಿ ಅರವತ್ತು ವರ್ಷಗಳಿಗಿಂತ ಮುಂಚೆ ಯಾವುದೇ ಹಂತದಲ್ಲಿ ಉದ್ಯೋಗಿಯು ಸ್ವಯಂ-ನಿವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.ಈ ಖಂಡದ ಪ್ರಕಾರ, ಮೃತನ ನಿಯೋಜನೆಯು ಖಾಯಂ ಸ್ವರೂಪದ್ದೆಂದು ಕಂಡುಬರುತ್ತದೆ.

38. ದಾಖಲೆಯಲ್ಲಿ ಮಂಡಿಸಿದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಪರಿಗಣಿಸಿ ಮತ್ತು ಆದಾಯ ತೆರಿಗೆ, ವೃತ್ತಿ ತೆರಿಗೆ ಮತ್ತು ಇತರ ಚಾರ್ಜುಗಳೆಡೆಗಿನ ಅವಶ್ಯಕ ಕಡಿತಗಳನ್ನು ಮಾಡಿ, ಆದಾಯ ತೆರಿಗೆ ಇತ್ಯಾದಿಯ ಕಡಿತದ ನಂತರ ಮೃತನ ವಾರ್ಷಿಕ ಆದಾಯವು 68,265/- ರೂ.ಗಳಾಗುವುದೆಂದು ನ್ಯಾಯಾಧಿಕರಣವು ನಿರ್ಣಯಕ್ಕೆ ಬಂದಿದೆ.ಆದರೆ, ಅಪೀಲುದಾರರು-ಕ್ಲೇಮುದಾರರ ಪರ ಮಾನ್ಯ ನ್ಯಾಯವಾದಿಗಳ ನಿವೇದನೆಯ ಹಿನ್ನೆಲೆಯಲ್ಲಿ, ಭವಿಷ್ಯ ನಿಧಿಯೆಡೆಗೆ ಮೃತನು ನೀಡಿದ 3,504/- ರೂ.ಗಳ ವಂತಿಗೆಯು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ, ಸದರಿ ಮೊತ್ತವನ್ನು ಸೇರಿಸಿದರೆ, ಮೃತನ ಮಾಸಿಕ ನಿವ್ವಳ ಆದಾಯವು 68,265 + 3,504 = 71,769/- ರೂ.ಗಳಾಗುತ್ತದೆ.

39. ಪ್ರಸ್ತುತ ಮೊಕದ್ದಮೆಯಲ್ಲಿ, ಮೃತನು ಪ್ರತಿಷ್ಠಿತ ಮಾಹಿತಿ ತಂತ್ರಜ್ಞಾನ (ಐಟಿ) ಕಂಪನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದನು ಮತ್ತು ಆತನಿಗೆ ಉಜ್ವಲ ಭವಿಷ್ಯವಿತ್ತು.ನಿಯೋಜನೆಯು ಖಾಯಂ ಸ್ವರೂಪದ್ದಾಗಿತ್ತೆಂಬುದನ್ನು ಪರಿಗಣಿಸಿ, ಭವಿಷ್ಯದ ನಿರೀಕ್ಷೆಗಳ ನಷ್ಟವಾಗಿ 50% ಮೊತ್ತವನ್ನು ಸೇರಿಸಬೇಕಾದ ಅಗತ್ಯವಿದ್ದು, ಅದು 35,884/- (71,769x50%) ರೂ.ಗಳಾಗುತ್ತದೆ ಮತ್ತು ಒಟ್ಟು ಆದಾಯವು 71,769 + 35884 = 1,07,653 ರೂ.ಗಳಾಗುತ್ತಿದ್ದು, ವಾರ್ಷಿಕವಾಗಿ ಅದು 1,07,653x12 = 12,91,836/- ರೂ.ಗಳಾಗುತ್ತದೆ.

40. ಐವರು ಅವಲಂಬಿತರಿದ್ದು, ಹಾಗಾಗಿ ಮೃತನ ಆದಾಯದ 1/ 4 ರಷ್ಟನ್ನು ಆತನ ವೈಯಕ್ತಿಕ ವೆಚ್ಚಗಳಾಗಿ ಎಂದರೆ 12,91,836 ರೂ. x1/ 4 = 3,22,959/ ರೂ.ಗಳನ್ನು ಕಡಿತಗೊಳಿಸಬೇಕಾಗುತ್ತದೆ.ಕಡಿತಗೊಳಿಸಿದ ನಂತರ, ಆತನ ಕುಟುಂಬಕ್ಕೆ ನೀಡಬೇಕಾದ ಮೊತ್ತ 9,68,877/- ರೂ.ಗಳು (12,91,836 ರೂ.ಗಳು -3,22,959/ ರೂ.ಗಳು).ಮೃತನ ವಯಸ್ಸನ್ನು ಪರಿಗಣಿಸಿ, 15 ರ ಗುಣಕವು ಅನ್ವಯವಾಗುತ್ತದೆ, ಹೀಗೆ, ಅವಲಂಬನೆಯ ನಷ್ಟದ ಶೀರ್ಷಿಕೆಯಡಿ ಸಂದಾಯನೀಯ ಪರಿಹಾರ 1,45,33,155/- ರೂ.ಗಳಾಗುತ್ತದೆ (9,68,877 ರೂ. x 15).

41. ಮಾಗಾ ಜನರಲ್ ಇನ್ಸುರನ್ಸ್ ಕಂಪನಿ ಅಮಿಟೆಡ್ -ವಿರುದ್ಧ-ನಾನು ರಾಮ್ 2018 ಎಸಿಜೆ 2782 ಮೊಕದ್ದಮೆಯಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಪ್ರಣಮ್ ಚ ಸೇಥಿ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಸಂವಿಧಾನ ಪೀಠದ ನಿರ್ಣಯವನ್ನು ಉಲ್ಲೇಖಿಸಿ, ದಾಂಪತ್ಯ ನಷ್ಟ ಶೀರ್ಷಿಕೆಯಡಿ ಪರಿಹಾರವನ್ನು ನೀಡುವ ಬಗ್ಗೆ ಚರ್ಚಿಸಿದೆ ಹಾಗೂ ' ದಾಂಪತ್ಯ ನಷ್ಟ ', ' ಪಾಲಕತ್ವ ನಷ್ಟ ' ಮತ್ತು ' ಮಕ್ಕಳ ನಷ್ಟ'ದ ನೀಡಿಕೆಗೆ ಮಾರ್ಗಸೂಚಿಗಳನ್ನು ಸಹ ಹೊರಡಿಸಿದೆ.ಕ್ಲೇಮುದಾರರು, ಮೃತನ ಪತ್ನಿ, ಮಗ, ಮಗಳು ಮತ್ತು ತಂದೆ-ತಾಯಿಗಳಾಗಿದ್ದಾರೆ.ಮೇಲೆ ಹೇಳಿದ ನಿರ್ಣಯದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಅನುಪಾತದ ಹಿನ್ನೆಲೆಯಲ್ಲಿ, ದಾಂಪತ್ಯ ನಷ್ಟಕ್ಕಾಗಿ ಪತ್ನಿಯು 40,000/- ರೂ.ಗಳ ಪರಿಹಾರಕ್ಕೆ ಹಕ್ಕುಳ್ಳವಳಾಗಿದ್ದಾಳೆ, ಪಾಲಕತ್ವದ ನಷ್ಟಕ್ಕೆ ಇಬ್ಬರು ಮಕ್ಕಳು ತಲಾ 30,000/ ರೂ.ಗಳ ಪರಿಹಾರಕ್ಕೆ ಹಕ್ಕುಳ್ಳವರಾಗಿದ್ದಾರೆ ಹಾಗೂ ಮಗನ ನಷ್ಟಕ್ಕೆ ತಂದೆ ತಾಯಿರಿಬ್ಬರೂ ತಲಾ 30,000/- ರೂ.ಗಳ ಮೊತ್ತಕ್ಕೆ ಹಕ್ಕುಳ್ಳವರಾಗಿದ್ದಾರೆ.ಇದರ ಜೊತೆಗೆ, ಕ್ಲೇಮುದಾರರು ಸಂಪದ ನಷ್ಟಕ್ಕೆ 15,000/- ರೂ.ಗಳಿಗೆ ಹಾಗೂ ಶವಸಂಸ್ಕಾರ ವೆಚ್ಚವಾಗಿ 15,000/- ರೂ.ಗಳ ಪರಿಹಾರಕ್ಕೆ ಹಕ್ಕುಳ್ಳವರಾಗಿದ್ದಾರೆ.

42. ತತ್ಪರಿಣಾಮವಾಗಿ, ಪುನರ್-ನಿರ್ಧರಿಸಿದ ಪರಿಹಾರ ಮೊತ್ತವು ಈ ಕೆಳಗಿನಂತಿದೆ:

| **ಕ್ರಮ ಸಂಖ್ಯೆ** | **ಪರಿಹಾರ ಶೀರ್ಷಿಕೆ** | **ಮೊತ್ತ ( ರೂ.ಗಳಲ್ಲಿ )** |
|---|---|---|
| 1 . | ಅವಲ ಂ ಬನೆ ನಷ್ಟ | 1,45,33,155.00 |
| 2 . | ದಾಂಪತ್ಯ ನಷ್ಟ | 40,000.00 |
| 3 . | ಪಾಲಕತ್ವದ ನಷ್ಟ | 60,000.00 |
| 4 . | ಮಕ್ಕಳ ನಷ್ಟ | 60,000.00 |
| 5 . | ಸಂಪದ ನಷ್ಟ | 15,000.00 |
| 6 . | ಶವಸಂಸ್ಕಾರ ವೆಚ್ಚ | 15,000.00 |
| | ಒಟ್ಟು | 1,47,23,155.00 |
| (ಒಂದು ಕೋಟಿ ನಲವತ್ತೇಳು ಲಕ್ಷದ ಇಪ್ಪತ್ತೂರು ಸಾವಿರದ ನೂರಾ ಐವತ್ತೈದು ರೂಪಾಯಿಗಳು ಮಾತ್ರ) | | |

43. ಹೀಗೆ, ಐತೀರ್ಪು ನೀಡಲಾದ ಒಟ್ಟು ಪರಿಹಾರದ ಮೊತ್ತವು, ನ್ಯಾಯಾಧಿಕರಣವು ನೀಡಿದ ಐತೀರ್ಪಿನ ಮೊತ್ತವಾದ 1,39,83,595/- ರೂ.ಗಳಿಗೆ ಬದಲಾಗಿ 1,47,23,155/- ರೂ.ಗಳಾಗಿದೆ.ಆದ್ದರಿಂದ ಹೆಚ್ಚಿಸಿದ ಪರಿಹಾರ ಮೊತ್ತವು 7,39,560/- ರೂ.ಗಳಾಗಿದೆ.

44. ನ್ಯಾಯಾಧಿಕರಣವು ವಾರ್ಷಿಕ 9% ರ ದರದಲ್ಲಿ ಬಡ್ಡಿಯನ್ನು ವಿಧಿಸಿ ಐತೀರ್ಪು ನೀಡಿದೆ.ವಾದಗಳನ್ನು ಮಂಡಿಸುವಾಗ, ವಿಮಾ ಕಂಪನಿಯ ಪರ ಮಾನ್ಯ ನ್ಯಾಯವಾದಿಗಳು, ಐತೀರ್ಪು ನೀಡಲಾಗಿರುವ ಬಡ್ಡಿಯು ಅತ್ಯಂತ ಹೆಚ್ಚಾಗಿದೆ ಮತ್ತು ಅಕಾರಣವಾದುದಾಗಿದೆ ಎಂದು ಪಟ್ಟು ಬಿಡದೆ ವಾದಿಸಿದ್ದಾರೆ.ಪ್ರಸ್ತುತ ಅಪೀಲಿನಲ್ಲಿ, ನಾವು ಪರಿಹಾರದ ಮೊತ್ತವನ್ನು 1,47,23,155/- ರೂ.ಗಳಿಗೆ ಹೆಚ್ಚಿಸಿದ್ದೇವೆ.ಐತೀರ್ಪು ನೀಡಿದ ಪರಿಹಾರದ ಮೇಲೆ ವಾರ್ಷಿಕ 9% ರ ದರದಲ್ಲಿ ಬಡ್ಡಿಯನ್ನು ವಿಧಿಸಿ ಐತೀರ್ಪು ನೀಡಲು, ನ್ಯಾಯಾಧಿಕರಣವು ಯಾವುದೇ ನಿರ್ದಿಷ್ಟ ಕಾರಣಗಳನ್ನು ನೀಡಿಲ್ಲ.ಹೆಚ್ಚಿನ ದರದ ಬಡ್ಡಿಯ ಐತಿರ್ಪು ನೀಡಲು ಯಾವುದೇ ಸಿಂಧುವಾದ ಕಾರಣಗಳು ಇಲ್ಲದೆ ಇರುವಲ್ಲಿ, ವಾರ್ಷಿಕ 6% ರ ದರದಲ್ಲಿ ಬಡ್ಡಿಯು ನ್ಯಾಯೋಚಿತವೆಂಬುದು ನಮ್ಮ ಅಭಿಪ್ರಾಯವಾಗಿದೆ.

45. ಪರಿಹಾರ ಮೊತ್ತವನ್ನು ಈ ಕೆಳಗೆ ವಿವರಿಸಿದಂತೆ ಹಂಚಿಕೆ ಮಾಡತಕ್ಕದ್ದು:

| **ಕ್ರಮ ಸಂಖ್ಯೆ** | **ವಿವರಗಳು** | **ಶೇಕಡಾವಾರು** |
|---|---|---|
| 1 | ಅರ್ಜಿದಾರ - ಪತ್ನಿ | 40 % |
| 2 | ಅರ್ಜಿದಾರ ಸಂಖ್ಯೆ . 2 — ಮಗ 2 | 20 % |
| 3 | ಅರ್ಜಿದಾರ ಸಂಖ್ಯೆ . 2 - ಮಗಳು | 20 % |
| 4 | ತಾಯಿ | 10 % |
| 5 | ತಂದೆ | 10 % |

ಎ) ಪತ್ನಿಗೆ ಬಡ್ಡಿ ಸಹಿತ ಹಂಚಿಕೆ ಮಾಡಿದ ಪರಿಹಾರದ 50% ರಷ್ಟನ್ನು, ಅ ಯಾವುದೇ ಅಂಚೆ ಕಚೇರಿ/ರಾಷ್ಟ್ರೀಕೃತ ಬ್ಯಾಂಕು/ಅನುಸೂಚಿತ ಬ್ಯಾಂಕಿನಲ್ಲಿ ಆಕೆಯ ಹೆಸರಿನಲ್ಲಿ 10 ವರ್ಷಗಳ ಪ್ರಾರಂಭಿಕ ಅವಧಿಗಾಗಿ ಠೇವಣಿ ಇಡತಕ್ಕದ್ದು ಹಾಗೂ ಆಕೆಯು ಸದರಿ ಠೇವಣಿಯ ಮೇಲಿನ ಕಾಲಿಕ ಬಡ್ಡಿಯನ್ನು ಪಡೆದುಕೊಳ್ಳಲು ಹಕ್ಕುಳ್ಳವಳಾಗಿರತಕ್ಕದ್ದು.ಉಳಿದ ಪರಿಹಾರದ ಮೊತ್ತವನ್ನು ಸೂಕ್ತ ಸೂಚನೆಯ ನಂತರ ಆಕೆಗೆ ಬಿಡುಗಡೆ ಮಾಡತಕ್ಕದ್ದು.

ಬಿ) ತಂದೆ-ತಾಯಿಗಳಿಗೆ ಬಡ್ಡಿ ಸಹಿತ ಹಂಚಿಕೆ ಮಾಡಿದ ಪರಿಹಾರದ 50% ರಷ್ಟನ್ನು, ಯಾವುದೇ ಅಂಚೆ ಕಚೇರಿ/ರಾಷ್ಟ್ರೀಕೃತ ಬ್ಯಾಂಕು/ಅನುಸೂಚಿತ ಬ್ಯಾಂಕಿನಲ್ಲಿ ಅವರವರ ಹೆಸರಿನಲ್ಲಿ 03 ವರ್ಷಗಳ ಪ್ರಾರಂಭಿಕ ಅವಧಿಗಾಗಿ ಠೇವಣಿ ಇಡತಕ್ಕದ್ದು ಹಾಗೂ ಅವರು ಸದರಿ ಠೇವಣಿಯ ಮೇಲಿನ ಕಾಲಿಕ ಬಡ್ಡಿಯನ್ನು

ಪಡೆದುಕೊಳ್ಳಲು ಹಕ್ಕುಳ್ಳವರಾಗಿರತಕ್ಕದ್ದು.ಉಳಿದ ಪರಿಹಾರದ ಮೊತ್ತವನ್ನು ಅವರಿಗೆ ಸೂಕ್ತ ಸೂಚನೆಯ ನಂತರ ಬಿಡುಗಡೆ ಮಾಡತಕ್ಕದ್ದು.

ಸಿ) ಅಪ್ರಾಪ್ತ ಮಕ್ಕಳಿಗೆ-ಅರ್ಜಿದಾರಸಂಖ್ಯೆ: 2 ಮತ್ತು 3 ಇವರ ಹೆಸರಿನಲ್ಲಿ ಬಡ್ಡಿ ಸಹಿತ ಹಂಚಿಕೆ ಮಾಡಿದ ಪರಿಹಾರದ ಪೂರ್ಣ ಮೊತ್ತವನ್ನು, ಅಪ್ರಾಪ್ತರ ಪಾಲಕರ ಆಯ್ಕೆಯ ಯಾವುದೇ ಅಂಚೆ ಕಚೇರಿ/ರಾಷ್ಟ್ರೀಕೃತ ಬ್ಯಾಂಕು/ಅನುಸೂಚಿತ ಬ್ಯಾಂಕಿನಲ್ಲಿ ಅವರು ಪ್ರಾಪ್ತ ವಯಸ್ಕರಾಗುವವರೆಗೆ ಠೇವಣಿ ಇಡತಕ್ಕದ್ದು ಮತ್ತು ಸದರಿ ಠೇವಣಿಯ ಮೇಲಿನ ಕಾಲಿಕ ಬಡ್ಡಿಯನ್ನು ಪಡೆದುಕೊಳ್ಳಲು ಅಪ್ರಾಪ್ತರ ಪಾಲಕರು ಸ್ವತಂತ್ರರಿರತಕ್ಕದ್ದು.

46. ತತ್ಪರಿಣಾಮವಾಗಿ, ವಿಮಾ ಕಂಪನಿಯು ಸಲ್ಲಿಸಿದ ಎಮ್‌ಎಫ್‌ಎಸಂಖ್ಯೆ: 7227/2017 ನ್ನು ವಜಾಗೊಳಿಸಲಾಗಿದೆ ಮತ್ತು ಕ್ಲೇಮುದಾರರು ಸಲ್ಲಿಸಿದ ಎಮ್‌ಎಫ್‌ಎಸಂಖ್ಯೆ: 7285/2017 ನ್ನು ಭಾಗಶಃ ಅನುಮತಿಸಲಾಗಿದೆ.

ಈ ತೀರ್ಪಿನ ಪ್ರಮಾಣೀಕೃತ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ನಾಲ್ಕು ವಾರಗಳ ಅವಧಿಯೊಳಗಾಗಿ, ಈ ನ್ಯಾಯಾಲಯದ ಮುಂದೆ ಅಥವಾ ನ್ಯಾಯಾಧಿಕರಣದ ಮುಂದೆ, ಈ ಮೊದಲು ಠೇವಣಿ ಇಟ್ಟ ಯಾವುದಾದರೂ ಪರಿಹಾರ ಮೊತ್ತವಿದ್ದರೆ, ಅದನ್ನು ಕಡಿತಗೊಳಿಸಿಕೊಂಡ ನಂತರ, ಅರ್ಜಿ ಸಲ್ಲಿಸಿದ ದಿನಾಂಕದಿಂದ ಠೇವಣಿ ಇಟ್ಟ ದಿನಾಂಕವರೆಗೆ ವಾರ್ಷಿಕ 6% ರ ದರದ ಬಡ್ಡಿ ಸಹಿತವಾಗಿ ಮರು-ನಿರ್ಧರಿಸಿದ ಪರಿಹಾರ ಮೊತ್ತವನ್ನು ಠೇವಣಿ ಇಡಲು, ಪ್ರತಿವಾದಿ ಸಂಖ್ಯೆ 2-ವಿಮಾ ಕಂಪನಿಗೆ ನಿರ್ದೇಶಿಸಲಾಗಿದೆ.

ಈ ನ್ಯಾಯಾಲಯದ ಮುಂದೆ ಠೇವಣಿ ಇರಿಸಿದ ಮೊತ್ತ ಯಾವುದಾದರೂ ಇದ್ದರೆ, ಅದನ್ನು ನ್ಯಾಯಾಧಿಕರಣಕ್ಕೆ ರವಾನಿಸತಕ್ಕದ್ದು.

ದಾಖಲೆಗಳನ್ನು ಈ ಕೂಡಲೇ ನ್ಯಾಯಾಧಿಕರಣಕ್ಕೆ ರವಾನಿಸಲು ರಿಜಿಸ್ಟ್ರಿಗೆ ನಿರ್ದೇಶಿಸಲಾಗಿದೆ.

ಪಕ್ಷಕಾರರು ಅವರಿಗೆ ಸಂಬಂಧಿಸಿದ ವೆಚ್ಚಗಳನ್ನು ಅವರೇ ಭರಿಸತಕ್ಕದ್ದು.